


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 288 | Wednesday 30-07-2025 | E-mail : maruti.b.hosamani76@gmail.com | Page: 4 | Price : Rs. 1/-


## ಶಾಸಕ ಎನ್.ಟಿ ಶ್ರೀನಿವಾಸ್ ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ – ಜಿಲ್ಲಾ ಜನಸ್ಪಂದನ ಕಾರ್ಯಕ್ರಮ





**ಸಿಹಿ ಕಹಿ ಸುದ್ದಿ, ಕೊಟ್ಟೂರು :** ತಾಲೂಕಿನ ಉಜ್ಜನಿ ಗ್ರಾಮದ ಶ್ರೀ ಮರುಳು ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಶಾಸಕರಾದ ಡಾ, ಶ್ರೀನಿವಾಸ್ ಎನ್ ಟಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರ ಮತ್ತು ಎಂ.ಎಸ್ ದಿವಾಕರ್ ಜಿಲ್ಲಾಧಿಕಾರಿಗಳು ಜನಸ್ಪಂದನಾ ಕಾರ್ಯಕ್ರಮ ಉದ್ಘಾಟನೆ ಮಾಡಲಾಯಿತು. ತಾಲೂಕಿನ ಆಡಳಿತ ಮತ್ತು ತಾಲೂಕು ಪಂಚಾಯತಿ ವತಿಯಿಂದ ಶಾಸಕರು ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತಾಲೂಕಿನ ಎಲ್ಲಾ ಅಧಿಕಾರಿಗಳ ಸಮ್ಮುಖದಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಸಿ ಸಾರ್ವಜನಿಕರ ಅಹವಾಲು ಸವಾಲುಗಳ ಅರ್ಜಿಗಳನ್ನು ಸ್ವೀಕರಿಸಲಾಯಿತು. ಕೆಲವೊಂದು ಅರ್ಜಿಗಳಿಗೆ ಅಲ್ಲೇ ಅಧಿಕಾರಿಗಳಿಂದ ಅರ್ಜಿಗಳಿಗೆ ಉತ್ತರ ನೀಡಲಾಯಿತು. ಬಂದಂತ ಅರ್ಜಿಗಳಲ್ಲಿ ಜೆಸ್ಕಾಂ ಇಲಾಖೆಗೆ ಹೆಚ್ಚು ಅರ್ಜಿ ಬರಲಾಯಿತು. ಪ್ರಮುಖವಾಗಿ ಉಜ್ಜನಿಯಲ್ಲಿ ಭಕ್ತಾದಿಗಳ ಸಂಖ್ಯೆ ಹೆಚ್ಚಾಗಿ ವಾರ ಮತ್ತು ಹುಣ್ಣಿಮೆ ಅಮಾವಾಸ್ಯೆ ದಿನ ಬರುವುದರಿಂದ ಗ್ರಾಮದಲ್ಲಿ ಸಾರ್ವಜನಿಕ ಶೌಚಾಲಯ ಬೇಕು ಮತ್ತು ಉಜ್ಜನಿ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆ ಇನ್ನೂ ಮುಂತಾದ ಸೌಲಭ್ಯಗಳು ಬೇಡಿಕೆಯಾಗಿತ್ತು. ಈ ಸಂದರ್ಭದಲ್ಲಿ ವಿಧವಾ ವೇತನ ಪ್ರಮಾಣ ಪತ್ರವನ್ನು ನೀಡಲಾಯಿತು. ಮೂಲಭೂತ ಸೌಕರ್ಯಗಳಾದ ಚರಂಡಿ ಸ್ವಚ್ಛತೆಗೆ ಇಲ್ಲದ ಕಾರಣ ಅರ್ಜಿಗಳು ಸಾರ್ವಜನಿಕರ ಸಮ್ಮುಖದಲ್ಲಿ ಪಿಡಿಓ ಗಳಿಗೆ ಮುನ್ನೆಚ್ಚರಿಕೆಯವಹಿಸುವಂತೆತಿಳಿಸಲಾಯಿತು. ಕಾಳಾಪುರ ಗ್ರಾಮಕ್ಕೆ ನ್ಯಾಯಬೆಲೆ ಅಂಗಡಿ ಬೇಕು, ಹನುಮನಹಳ್ಳಿ ಕೊನೆ ಗಡಿ ಭಾಗವಾಗಿರುವುದರಿಂದ ಹನುಮನಹಳ್ಳಿ ಯಿಂದ ಮಾಗಡಿ ರಸ್ತೆ ಹನುಮನಹಳ್ಳಿ ಯಿಂದ ನಾಗರಕೊಂಡ ರಸ್ತೆ ನಿರ್ಮಾಣಕ್ಕೆ ಅರ್ಜಿ ನೀಡಲಾಯಿತು. ಜೆಜೆಮ್ ಕಾಳಾಪುರ ಗ್ರಾಮ ಪಂಚಾಯತಿ ಕಳಪೆ ಕಾಮಗಾರಿ ವಿರುದ್ಧ ಅರ್ಜಿ ಸಲ್ಲಿಸಲಾಯಿತು. ಶ್ರೀ ಕ್ಷೇತ್ರ ಮುರುಳಿಸಿದ್ದೇಶ್ವರರ ನೆಲೆಸಿರುವ ಗ್ರಾಮ ವಾಗಿರುವುದರಿಂದ ಮೂರು ನಾಲ್ಕು ತಾಲೂಕಗಳಿಂದ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಕಟ್ಟಡ ಮಾಡಲು ಮುಂದಾಗಿದ್ದಾರೆ ದಯವಿಟ್ಟು ಇದನ್ನು ನಿಲ್ಲಿಸಬೇಕೆಂದು ಅರ್ಜಿ ನೀಡಲಾಯಿತು. ಇನ್ನೂ ಮುಂತಾದ ಹಲವು ಅರ್ಜಿಗಳನ್ನು ಸ್ವೀಕರಿಸಲಾಯಿತು. ಅಲ್ಲೇ ಇದ್ದ ಸಾರ್ವಜನಿಕರು ಮನದಲ್ಲಿ ಗುಣಗಾಡುತ್ತಿದ್ದರು ಇದರಲ್ಲಿ ಎಷ್ಟರ ಮಟ್ಟಿಗೆ ಅರ್ಜಿಗಳಿಗೆ ಉತ್ತರ ಸಿಗುವುದೋ ಇಲ್ಲವೋ ಎಂದು ಗುಣದಾಡುತ್ತಿದ್ದರು. ಹೀಗಾಗಿ ಈ ಜನಸ್ಪಂದನ ಕಾರ್ಯಕ್ರಮ ಯಶಸ್ವಿಯಾಗಿ ನಡೆದರೂ ಕೂಡ ಮುಂದೆ ಅರ್ಜಿಗಳಿಗೆ ಉತ್ತರ ನೀಡಿ–ದಾಗ ಯಶಸ್ವಿ ಆಗುವುದೆಂದು ಸಾರ್ವಜನಿಕರು ಮತ್ತು ಸಂಘಟನಾಕಾರರು ಮಾತನಾಡಿದರು. ಈ ಸಂದರ್ಭದಲ್ಲಿ ಎನ್.ಮೊಮ್ಮದ್ ಅಲಿ ಅಕ್ರಮ್ ಸಿ.ಇ.ಓ, ದೊಡ್ಮನಿ ಮಲ್ಲೇಶ್ ಡಿ.ವೈ. ಎಸ್ಪಿ, ಸಿ.ಪಿ.ಐ, ಡಿ.ಎಚ್.ಓ, ತಹಶೀಲ್ದಾರರು, ಗೀತಾಂಜಲಿ ಸಿಂಧೆ ಪಿಎಸ್ಐ ಜಿಲ್ಲೆಯ ಹಲವು ಅಧಿಕಾರಿಗಳು ಸಾರ್ವಜನಿಕರು ಸಂಘಟನಾಕಾರರು ಸೇರಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## ನಡೆ ನುಡಿ ಒಂದಾದ ಬರಹ ದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ – ಭೋವಿ ಗುರು ಪೀಠದ ಪೂಜ್ಯ ಇಮ್ಮಡಿ ಸಿದ್ಧರಾಮ ಸ್ವಾಮೀಜಿ ಅಭಿಮತ





**ಸಿಹಿ ಕಹಿ ಸುದ್ದಿ,**

**ಚಿತ್ರದುರ್ಗ :** ಒಂದು ಬರಹ ಉತ್ತಮ ಎಂದು ಪರಿಗಣಿಸ ಬೇಕಾದರೆ ಅದು ಬಸವಾದಿ ಶಿವಶರಣರು ತಿಳಿಸಿದ ನಡೆ ನುಡಿಯ ಹೊಂದಾಣಿಕೆಯಿಂದ ಕೂಡಿರುವುದು ಬಹಳ ಅಗತ್ಯ ಎಂದು ಚಿತ್ರದುರ್ಗದ ಭೋವಿ ಗುರು ಪೀಠದ ಪೂಜ್ಯ ಇಮ್ಮಡಿ ಸಿದ್ಧರಾಮ ಸ್ವಾಮೀಜಿ ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಕವಿ ಗಿರೀಶ್ ಎಸ್.ಸಿ ಅವರ ಚೊಚ್ಚಲ ಕವನ ಸಂಕಲನ "ರಾಗಿ ತೆನೆ" ಪುಸ್ತಕ ಬಿಡುಗಡೆ ಹಾಗೂ ಕವಿಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಗಿರೀಶ್ ಅವರ "ರಾಗಿ ತೆನೆ" ಕವನ ಸಂಕಲನವು ನಡೆ ನುಡಿ ಒಂದಾದ ಪುಸ್ತಕವಾಗಿದೆ ಎಂದು ಕೃತಿ ರಚನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪುಸ್ತಕ ಬಿಡುಗಡೆ ಗೊಳಿಸಿ ಮಾತನಾಡಿದ ಶಿವಮೊಗ್ಗದ ಹಿರಿಯ ಪತ್ರಕರ್ತ ಆರುಂಡಿ ಶ್ರೀನಿವಾಸಮೂರ್ತಿ ಅವರು ಕಾವ್ಯಕ್ಕೆ ಯಾವುದೇ ಕಟ್ಟುಪಾಡಿರದೆ ಅದು ಜಾತಿ ಮತ ಪಂಗಡಗಳನ್ನು ಮೀರಿ ರಚನೆ ಯಾಗಬೇಕು, ಕವಿತೆಗಳು ಅನುಭವದ ಸಾಹಿತ್ಯದಿಂದ ಮೂಡಿ ಬರಬೇಕು. "ರಾಗಿ ತೆನೆ" ಕವನ ಸಂಕಲನವು ಮಾನವೀಯ ಸಂಬಂಧಗಳನ್ನು ಕಟ್ಟಿ ಕೊಡುತ್ತದೆ. ಈ ಕವನದ ಸಂಕಲನದ ಶೀರ್ಷಿಕೆಯಾದ ರಾಗಿಗೆ ಜಾನಪದೀಯ ಮತ್ತು ಪೌರಾಣಿಕ ಹಿನ್ನೆಲೆ ಚರಿತ್ರೆಯಿದೆ. ಆದ್ದ–ರಿಂದ ಇದೊಂದು ಉತ್ತಮ ಕವನಗಳನ್ನು ಒಳಗೊಂಡ ಪುಸ್ತಕವಾಗಿದ್ದು ಇದನ್ನು ಪ್ರತಿಯೊಬ್ಬರೂ ಕೊಂಡು ಓದಬೇಕೆಂದು ಕಿವಿಮಾತು ಹೇಳಿದರು.

"ರಾಗಿ ತೆನೆ" ಕವನ ಸಂಕಲನದ ಕುರಿತು ಮಾತನಾಡಿದ ಶಿವಾನಂದ್.ಎನ್ ಬಂಡೇಹಳ್ಳಿ ಅವರು ರಾಮನಗರ ಗಿರೀಶ್ ಅವರ ರಾಗಿ ತೆನೆ ಕವನ ಸಂಕಲನವು ಕಾವ್ಯದ ಎಲ್ಲಾ ವಸ್ತುಗಳನ್ನು ಒಳಗೊಂಡ ಅರವತ್ತೆಂಟು ಅರ್ಥ ಪೂರ್ಣ ಕವನಗಳುಳ್ಳ ಪುಸ್ತಕವಾಗಿದ್ದು ಬದುಕಿನ ನೈಜ ಚಿತ್ರಣವನ್ನು ಕಟ್ಟಿಕೊಡುತ್ತದೆ. ಸಾಹಿತ್ಯಲೋಕಕ್ಕೆ ಇದೊಂದು ಉತ್ತಮ ಕೊಡುಗೆಯಾಗಿದೆ ಎಂದು ಪ್ರಶಂಸಿದರು. ಚಿನ್ಮೂಲದ್ರಿ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ದಯಾವತಿ ಪುತ್ತೂರ್ಕರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರೆ, ಗೌರವಾಧ್ಯಕ್ಷರಾದ ಬಿ.ಕೆ ರಹಮತ್ ವುಲ್ಲಾ ಅವರು ಆಶಯ ಭಾಷಣ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ, ಶಫೀವುಲ್ಲಾ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಚಿತ್ರದುರ್ಗದ ವಿವಿಧ ಮಠಗಳ ಮಠಾಧೀಶರು, ಹರಿಹರದ ಡಾ, ಪ್ರಾನ್ಸಿಸ್ ಕ್ಸೇವಿಯರ್, ಪರಮೇಶ್ವರಪ್ಪ ಕುದುರಿ, ಶಿಕ್ಷಕಿ ಸೌಭಾಗ್ಯಲಕ್ಷ್ಮೀ, ಗಾನಯೋಗಿ ಸಂಗೀತ ಬಳಗದ ಕೋಕಿಲಾ ರುದ್ರಮೂರ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಚಿತ್ರದುರ್ಗದ ಶ್ರೀಗಾನಯೋಗಿ ಸಂಗೀತ ಬಳಗದ ಸದಸ್ಯರು ವಿಶೇಷ ಸಮೂಹ ಗಾಯನ ನಡೆಸಿ ಕೊಟ್ಟರು. ಮಧ್ಯಾಹ್ನ ನಡೆದ ಕವಿಗೋಷ್ಠಿ ಹಾಗೂ ಸಂಗೀತ ಕಾರ್ಯಕ್ರಮದಲ್ಲಿ ನಾಡಿನ ವಿವಿಧೆಡೆಗಳಿಂದ ಆಗಮಿಸಿದ್ದ ಕವಿಗಳು ಕವನ ವಾಚಿಸಿದರೆ ಮತ್ತು ಗಾಯಕರು ಸುಶ್ರಾವ್ಯವಾಗಿ ಹಾಡಿದರು. ಈ ಸಾಹಿತ್ಯ ಸಂಭ್ರಮದಲ್ಲಿ ಸುಮಾ ರಾಜಶೇಖರ್, ನಾಜೀಯಾ, ಡಾ, ಬಸವರಾಜ ಹರ್ತಿ, ಶಾರದಾ ಜೈರಾಮ್, ನವೀನ್ ಸಜ್ಜನ್, ಮುರಳೀಧರ ಬಿ, ತಿಪ್ಪಮ್ಮ, ವಿನಾಯಕ, ಮಮತ, ತಿಪ್ಪೀರಮ್ಮ, ಪಗಲಬಂಡೆ ನಾಗೇಂದ್ರಪ್ಪ, ಯತೀಶ್ ಎಂ ಸಿದ್ದಾಪುರ, ಶಿವರುದ್ರಪ್ಪ, ಸತೀಶ್ ಕುಮಾರ್, ಜಯಪ್ರಕಾಶ್, ನಿರ್ಮಲಾ, ಉಷಾರಾಣಿ , ಶೋಭಾ, ಡಿ.ಬಿ ನಾಯಕ್, ಬೆಳಕುಪ್ರಿಯ ಸೇರಿದಂತೆ ಚಿನ್ಮೂಲದ್ರಿ ಸಾಹಿತ್ಯ ವೇದಿಕೆ ಹಾಗೂ ಶ್ರೀಗಾನಯೋಗಿ ಸಂಗೀತ ಬಳಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ವರದಿ–ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

# ಅವಳಿ ನಗರಗಳಿಗೆ ಜಿಲ್ಲಾಧಿಕಾರಿ ಭೇಟಿ

**ರಬಕವಿ–ಬನಹಟ್ಟಿ :** ಮಂಗಳವಾರ ಮಧ್ಯಾಹ್ನ ಜಿಲ್ಲಾಧಿಕಾರಿ ಸಂಗಪ್ಪ ಇಲ್ಲಿ ಆಕಸ್ಮಿಕ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಅವರು ಪ್ರಜಾಸೌಧ ನಿರ್ಮಾಣ ಮಾಡಲು ಜಿ. ಎಲ್. ಬಿ. ಸಿ. ಹತ್ತಿರದ ಸ್ಥಳ ಹಾಗೂ ರಬಕವಿಯ ಸರ್ವೆ ನಂಬರ್ 63 ರಲ್ಲಿಯ ನಾಯಕರ ಗುಡ್ಡದ ಪ್ರದೇಶದ ಸ್ಥಳ ಪರಿಶೀಲನೆ ಮಾಡಿದರು.

ರಬಕವಿ ಬನಹಟ್ಟಿ ತಾಲ್ಲೂಕು ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿದ ನಂತರ, ರಬಕವಿ ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ತೆರಳಿ ಅಲ್ಲಿಯ ಬಾಣಂತಿಯರ ಕೋಣೆ ಹಾಗೂ ಒಳ ರೋಗಿಗಳ ಜೊತೆಗೆ ಚರ್ಚೆ ಮಾಡಿದರು.

ನಂತರ ಇನ್ನೂ ಆರಂಭವಾಗದೆ ಇರುವ ಇಂದಿರಾ ಕ್ಯಾಂಟೀನ್ ಮತ್ತು ಕೆ. ಎಚ್. ಡಿ. ಸಿ. ಕಾರ್ಯಾಲಯಕ್ಕೂ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಜಮಖಂಡಿಯ ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಕರ್, ತಹಶೀಲ್ದಾರ್ ಗಿರೀಶ ಸ್ವಾದಿ, ರಬಕವಿ ಬನಹಟ್ಟಿ ನಗರಸಭೆಯ ಪೌರಾಯುಕ್ತ ರಮೇಶ ಜಾಧವ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.



## ಕಲುಷಿತ ನೀರು ಕುಡಿದ ಗ್ರಾಮಸ್ಥರು ಆರೋಗ್ಯ ವಿಚಾರಿಸಿದ – ಪ್ರಭುಗೌಡ ಲಿಂಗದಳ್ಳಿ



**ಸಿಹಿ ಕಹಿ ಸುದ್ದಿ,**

**ಬ್ಯಾಲಿಹಾಳ :** ಕಲುಷಿತ ನೀರು ಕುಡಿದು ಸುಮಾರು 60 ಕ್ಕಿಂತ ಹೆಚ್ಚು ಜನರು ಅಸ್ವಸ್ಥ ಗೊಂಡ ಘಟನೆ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲೂಕಿನ ಬ್ಯಾಲಿಹಾಳಗ್ರಾಮದಲ್ಲಿನಡೆದಿದೆ.ಅಸ್ವಸ್ಥಗೊಂಡವರು. ಬಸವನ ಬಾಗೇವಾಡಿ ತಾಲೂಕಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವರು ಹತ್ತಿರದ ಖಾಸಗಿ ಆಸ್ಪತ್ರೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮದ ಕೊಳವೆ ಭಾವಿ ನೀರು ಕುಡಿಯುವುದರಿಂದ ಜನರಿಗೆ ವಾಂತಿ ಭೇದಿಯಿಂದ ಆರೋಗ್ಯ ಏರೂಪೇರಾಗಿ ಎಂದು ತಿಳಿದು ಬಂದಿದೆ. ಈ ಸುದ್ದಿ ತಿಳಿದ ಕೂಡಲೇ ಬಸವನ ಬಾಗೇವಾಡಿ ಸಾರ್ವಜನಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಗ್ರಾಮಸ್ಥರು ಆರೋಗ್ಯ ವಿಚಾರಿಸಿದ.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಹಾಗೂ ದೇವರ ಹಿಪ್ಪರಗಿ ವಿಧಾನ ಸಭಾ ಮತ ಕ್ಷೇತ್ರದ ಉಸ್ತುವಾರಿಯಾದ ಡಾ, ಪ್ರಭುಗೌಡ. ಲಿಂಗದಳ್ಳಿಯವರು, ನಂತರ ವೈದ್ಯರ ಜೊತೆ ಮಾತನಾಡಿ. ಕಲುಷಿತ ನೀರು ಕುಡಿದ ಗ್ರಾಮಸ್ಥರನ್ನು ಸರಿಯಾದ ಚಿಕಿತ್ಸೆ ನೀಡಿ ಎಂದು ಹೇಳಿದರು. ತದನಂತರ ಬ್ಯಾಲಿಹಾಳ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿ ಇದ್ದ ಜನರಿಗೆ ಜಾಗ್ರತೆ ಮೂಡಿಸಿ ಅವರು ಜೊತೆ ಮಾತನಾಡಿ.

ಇನ್ನೂ ಮುಂದೆ ಇಂತಹ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ವೈದ್ಯೆರಾದ ಡಾ, ಕವಿತಾ. ದೊಡ್ಡಮನಿ ಹಾಗೂ ಡಾ, ಸಾಬೀರ ಪಟೇಲ ಹಾಗೂ ದತ್ತತರಾಯ್ಯ ಹೊಸಮಠ, ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ.ದೇವರ ಹಿಪ್ಪರಗಿ,**

## ಹಸಿದವರಿಗೆ ಅನ್ನ ಸಿಗಬೇಕು: ಜಿಲ್ಲೆಯಲ್ಲಿ ಇನ್ನೂ ಒಂಭತ್ತು ಇಂದಿರಾ ಕ್ಯಾಂಟಿನ್‌ಗೆ ಚಾಲನೆ: ಸಚಿವ ತಿಮ್ಮಾಪೂರ



**ಮುಧೋಳ :** ಹಸಿವಿನಿಂದ ಯಾರೂ ಬಳಲಬಾರದು. ಪ್ರತಿಯೊಬ್ಬರಿಗೆ ಅನ್ನ ಸಿಗಬೇಕು. ಈ ದಿಶೆಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಇಂದಿರಾ ಕ್ಯಾಂಟಿನಗಳನ್ನು ಪುನಃ ಆರಂಭಿಸುತ್ತಿದ್ದು ಇದು ವಿಶೇಷವಾಗಿ ಕೂಲಿ ಕಾರ್ಮಿಕರಿಗೆ, ಬಡವರಿಗೆ,

ರೈತ ಕಾರ್ಮಿಕರಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಹೇಳಿದರು.

ಇತ್ತೀಚೆಗೆ ಅವರು ಇಂದಿರಾ ಕ್ಯಾಂಟಿನಿಗೆ ಹೋಗಿ ಎಲ್ಲರಂತೆ ಸರದಿ ಸಾಲಿನಲ್ಲಿ ನಿಂತು ಅಲ್ಲಿನಉಪಹಾರಸೇವಿಸಿಮಾತನಾಡಿದರು. ಈಗಾಗಲೇ ಜಿಲ್ಲೆಯಲ್ಲಿ ಏಳು ಇಂದಿರಾ ಕ್ಯಾಂಟಿನಗಳು ಪ್ರಾರಂಭವಾಗಿದ್ದು, ಇನ್ನೂ ಒಂಭತ್ತು ಕ್ಯಾಂಟಿನಗಳನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದೆಂದು ಹೇಳಿದರು. ಸಾರ್ವಜನಿಕರು ರಿಯಾಯತಿ ದರದಲ್ಲಿ ಸಿಗುವ ಇಲ್ಲಿಯ ಆಹಾರವನ್ನುಸೇವಿಸಿ ತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳಬೇಕೆಂದು ಸಲಹೆ ಮಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು, ಗಣ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

## ಬಸವ ತತ್ವ ಪ್ರಸಾರಕ ಮೋಹನ ಪಾಟೀಲ ಜನ್ಮದಿನಾಚರಣೆ



**ಬೈಲಹೊಂಗಲ :** ಇಲ್ಲಿಯ ಸರಳ ಸಜ್ಜನಿಕೆಯ ಸಾಕಾರ ಮೂರ್ತಿ, ಜನಸಾಮಾನ್ಯರ ಒಡನಾಡಿ, ಬೆಂಗಳೂ–ರಿನ ಕೇಂದ್ರ ಬಸವ ಸಮಿತಿಯ ಕಾರ್ಯಕಾರಿಣಿ ಸಮಿತಿಯ ಹಿರಿಯ ಸದಸ್ಯರು,

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳಗಾವಿ ಜಿಲ್ಲೆಯ ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಬೆಳಗಾವಿ ಜಿಲ್ಲೆಯ ಮಾಜಿ ಅಧ್ಯಕ್ಷರು, ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಾಜ್ಯಮಟ್ಟದ ಮಾಜಿ ಸದಸ್ಯರು, ಕಿತ್ತೂರ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯರು, ಬೈಲಹೊಂಗಲ ತಾಲ್ಲೂಕು ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷರು, ಭಾರತ ಕೃಷಿಕ ಸಮಾಜದ ಕೌನ್ಸಿಲ್ ಸದಸ್ಯರು ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಬೆಳಗಾವಿ ಜಿಲ್ಲಾ ಮಾಜಿ ಪ್ರತಿನಿಧಿಗಳಾದ ಶ್ರೀ ಮೋಹನ ಬಸನಗೌಡ ಪಾಟೀಲ ಅವರಿಗೆ ಸಮಸ್ತ ಗೆಳೆಯರ ಬಳಗದ ವತಿಯಿಂದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋ–ರಿದ ಸಂದರ್ಭ ತೆಗೆದ ಚಿತ್ರ.

# ರೈತನೇ ಮೊದಲ ಕೃಷಿ ವಿಜ್ಞಾನಿ: ಮುರುಗೇಶ ನಿರಾಣಿ



**ಮುಧೋಳ :** ಕೃಷಿ ಅಧ್ಯಯನ ಪ್ರವಾಸ ರೈತರಲ್ಲಿ ಉತ್ಸಾಹ ಬೆಳೆಸುತ್ತದೆ. ಹೊಸ ಹೊಸ ಪ್ರಯೋಗಗಳಿಗೆ ಸಜ್ಜುಗೊಳಿಸುತ್ತದೆ. ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಸರ್ಕಾರ, ಸಂಘ ಸಂಸ್ಥೆಗಳು, ಕೃಷಿ ಆಧಾ–ರಿತ ಉದ್ದಿಮೆಗಳು, ಬ್ಯಾಂಕುಗಳು ರೈತರನ್ನು ಬೇರೆ ಬೇರೆ ರಾಜ್ಯಗಳಿಗೆ, ದೇಶಗಳಿಗೆ ಕೃಷಿ ಅಧ್ಯಯನ ಪ್ರವಾಸಕ್ಕೆ ಕಳಿಸಿ ಕೊಡಬೇಕೆಂದು ಮಾಜಿ ಸಚಿವ ನಿರಾಣಿ ಉದ್ಯೋಗ ಸಮೂಹದ ಅಧ್ಯಕ್ಷ ಡಾ. ಮುರುಗೇಶ ನಿರಾಣಿ ಹೇಳಿದರು.

ಮಹಾರಾಷ್ಟ್ರ ರಾಜ್ಯದಲ್ಲಿ ನಾಲ್ಕು ದಿನ ಕೃಷಿ ಅಧ್ಯಯನ ಕುರಿತು ಯಶಸ್ವಿ ಪ್ರವಾಸ ಮಾಡಿ ಮರಳಿ ಬಂದ ರೈತರನ್ನು ಸ್ವಾಗತಿಸಿ ಅವರು ಮಾತನಾಡಿದರು.

ರೈತ ಮೊದಲು ಕೃಷಿ ವಿಜ್ಞಾನಿ ಎಂಬ ಮಾತೊಂದಿದೆ. ಸೂಕ್ತ ಸಮಯಕ್ಕೆ ಉಳುಮೆ ಮಾಡುವ, ಉತ್ತಮ ಬೀಜಗಳನ್ನು ಕಾಯ್ದಿಡುವ, ಸಕಾಲಕ್ಕೆ ರಾಶಿ ಮಾಡುವ ವಿಧಾನಗಳನ್ನು ರೈತ ಪ್ರಯೋಗಶೀಲತೆಯಿಂದ ಕಲಿತು ಕೊಂಡಿದ್ದಾನೆ.

ಬೆಳೆದ ಬೆಳೆಯನ್ನು ಎಲ್ಲರೊಂದಿಗೆ ಹಂಚಿಕೊಂಡು ಊಟ ಮಾಡುವುದು ನೇಗಿಲ ಯೋಗಿಯ ಧರ್ಮವಾಗಿದೆ ಎಂದು ನಿರಾಣಿ ಹೇಳಿದರು.

ನಿರಾಣಿ ಸಕ್ಕರೆ ಕಾರ್ಖಾನೆಯ ಪರವಾಗಿ ಇನ್ನೂರು ರೈತರನ್ನು ಅಧ್ಯಯನಕ್ಕೆ ಕಳುಹಿಸಿ ಕೊಡಲಾಗಿತ್ತು.

ಮಹಾರಾಷ್ಟ್ರದ ಪಾಟಸ್ಕರ್ ಸಕ್ಕರೆ ಕಾರ್ಖಾನೆ, ಉರುಳಿಕಾಂಚನ ಕೃಷಿ ಕ್ಷೇತ್ರ, ಬಾರಾಮತಿಯ ಕೃಷಿ ವಿಜ್ಞಾನ ಕೇಂದ್ರ, ರಾಹುರಿ ಕೃಷಿ ವಿದ್ಯಾಪೀಠ ಹಾಗೂ ಜೈನ್ ಇರಿಗೇಷನ್ ಸಂಸ್ಥೆಗೆ ಭೇಟಿ ನೀಡಿ ಬಂದ ರೈತರು ತಮ್ಮ ಅನುಭವವನ್ನು ಉತ್ಸಾಹದಿಂದ ವಿವರಿಸಿದರು.

ಮಹಾರಾಷ್ಟ್ರದ ರೈತರು ಪ್ರತಿ ಎಕರೆಗೆ 80–100 ಟನ್ ಕಬ್ಬು ಬೆಳೆಯುವುದು ಸಾಮಾನ್ಯವಾಗಿದೆ. ಶ್ರದ್ಧೆ ಭಕ್ತಿಯಿಂದ ಅವರು ಕೃಷಿ ಕಾರ್ಯ ಮಾಡುತ್ತಿರುವುದು ಬಹಳ ಮೆಚ್ಚುಗೆಯಾಯಿತು. ನೀರು ಮಿತವಾಗಿ ಬಳಸುವ, ಭೂಮಿ ಸವಳು ಜವಳಾಗದಂತೆ ಕಾಪಾಡಿಕೊಳ್ಳುವ ಬಗ್ಗೆ ಬಹಳ ಕಾಳಜಿ ವಹಿಸುತ್ತಾರೆ. ಈ ಪ್ರವಾಸ ನಮ್ಮಲ್ಲಿ ಬಹಳ ಉತ್ಸಾಹ ತುಂಬಿತೆಂದು ರೈತರು ವಿವ–ರಿಸಿದರು.

ರೈತರಾದ ಸುಭಾಷ ಶಿರಬೂರ, ಎಸ್. ಪಿ. ದಾನಪ್ಪಗೋಳ, ಮಾದೇವ ಮುರನಾಳ, ಚೆನ್ನಪ್ಪ ಪುರಾಣಿಕ ತಮ್ಮ ಪ್ರವಾಸದ ಅನುಭವ ರಸವತ್ತಾಗಿ ವಿವರಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಸಂಗಮೇಶ ನಿರಾಣಿ, ಎನ್.ವಿ. ಪಡಿಯಾರ ಹಾಜರಿದ್ದರು.

**ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿದೆವು. ಅಲ್ಲಿ ಕಬ್ಬು ಸಾಗಿಸುವುದಕ್ಕೆ, ಕಟಾವಿಗೆ ಲಗಾನಿ ಕೊಡಬೇಕಾಗಿಲ್ಲ. ಕಬ್ಬು ನಾಟಿ ಮಾಡಿದ ದಿನಾಂಕ ಮತ್ತು ಸಮಯವನ್ನು ನೋಂದಣಿ ಮಾಡಲಾಗುತ್ತದೆ. ತಾರತಮ್ಯವಿಲ್ಲದೆ ಕಬ್ಬು ಸಾಗಾಣಿಕೆ ವ್ಯವಸ್ಥೆ ಮಾಡಲಾಗುತ್ತದೆ. ಕರ್ನಾಟಕದಲ್ಲಿ ಇದು ಜಾರಿಯಾಗಬೇಕು.**

**। ರವೀಂದ್ರ ಹಳಿಂಗಳಿ.**

# ಸಾಧಿಸುವ ಮನೋಸ್ಥಿತಿ ಬೆಳೆಸಿಕೊಳ್ಳಿ




**ಬಾಗಲಕೋಟೆ:**ಚಿಕ್ಕವಯಸ್ಸಿನಲ್ಲಿದೊಡ್ಡಸಾಧನೆ ಮಾಡಿದ ನಾಡಿನ ಹಲವು ಸಾಧಕರ ಬದುಕು-ಬರಹದಿಂದ ಪ್ರೇರಣೆ ಪಡೆದುಜೀವನದಲ್ಲಿ ಸಾಧಿಸುವಮನೋಸ್ಥಿತಿಯನ್ನುವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಬಸವೇಶ್ವರ ಕಲಾ ಕಾಲೇಜಿನ ಸ್ನಾತಕೋತ್ತರ ವಿಭಾಗದಕನ್ನಡ ಪ್ರಾಧ್ಯಾಪಕಡಾ.ಬಸವರಾಜಕುಂಬಾರ ಹೇಳಿದರು.

ನಗರದವಿದ್ಯಾಪ್ರಸಾರಕಮಂಡಳದಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯಮಹಾವಿದ್ಯಾಲಯದಇತಿಹಾಸಮತ್ತು ಪ್ರಾಚ್ಯಶಾಸ್ತ್ರ ವಿಭಾಗವುಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಬೀಳ್ಕೊಡುವ ಕಾರ್ಯಕ್ರಮದಲ್ಲಿಅವರು ಮಾತನಾಡಿದರು.

ವ್ಯಕ್ತಿ ಅಳಿದು ಹೋಗುತ್ತಾನೆ.ಆದರೆ ವ್ಯಕ್ತಿತ್ವ ಮಾತ್ರ ಶಾಸ್ವತವಾಗಿ ಉಳಿಯುತ್ತದೆ. ನಿರ್ದಿಷ್ಟ ಶಕ್ತಿಯನ್ನುಬಳಸಿಕೊಂಡುವಿಶ್ವಮಾನವಆಗುವ ರೀತಿಯಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಮೊಬೈಲ್‌ಗೆದಾಸರಾಗದೇ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.ಕೇವಲ ಪರೀಕ್ಷಾದೃಷ್ಟಿಯಿಂದಅಭ್ಯಾಸ ಮಾಡದೇ ಭಾವೀ ಭವಿಷ್ಯತ್ತಿಗೆಓದಬೇಕುಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ ಪ್ರತಿಯೊಬ್ಬ ವ್ಯಕ್ತಿಗೂ ವ್ಯಕ್ತಿತ್ವವಿದೆ.ಅದನ್ನು ವಿಕಾಸಗೊಳಿಸುವ ಅವಕಾಶವೂ ಅವನಿಗಿದೆ. ಆದರೆಅದಕ್ಕೆ ಮನಸ್ಸು ಬೇಕು. ಮನುಷ್ಯನಎಲ್ಲ ಪ್ರಯತ್ನಗಳ ಅಂತಿಮಗುರಿ ವ್ಯಕ್ತಿತ್ವದ ವಿಕಾಸವೇ ಆಗಿದೆ-ಎಂದರು. ಕಲಿಕೆ ನಿರಂತರ ಪ್ರಕ್ರಿಯೆಯಾಗಿದ್ದುಅದುಜ್ಞಾನದಕ್ಷಿತಿಜವನ್ನು ವಿಸ್ತ-ರಿಸುತ್ತದೆ. ಇಂತಹಜ್ಞಾನವನ್ನು ವಿದ್ಯಾರ್ಥಿಗಳು ಸರಿಯಾದರೀತಿಯಲ್ಲಿ ಬಳಸಿಕೊಳ್ಳಬೇಕು. ಪದವಿ ನಂತರದಜವಾಬ್ದಾರಿಯನ್ನು ಸಮಥ-ರ್ವಾಗಿ ನಿಭಾಯಿಸಿ ಜೀವನದಲ್ಲಿಯಶ ಪಡೆಯಬೇಕುಎಂದರು.

ವಿದ್ಯಾರ್ಥಿಗಳಾದ ಮಲ್ಲಿಕಾರ್ಜುನ ಶಿವಪುರ ಮತ್ತು ಶ್ರುತಿ ನಾಯಕ ಅನಿಸಿಕೆ ಹೇಳಿದರು. ಸಹನಾ ನರೇಗಲ್ ಹಾಗೂ ಸರಸ್ವತಿ ತಳವಾರ ಪ್ರಾರ್ಥಿಸಿದರು. ಮಂಜುಳಾ ಚಿಂಚಲಿ ಸ್ವಾಗತಿಸಿದರು.ಯಶೋಧಾಸಂಶಿವಂದಿಸಿದರು. ಜ್ಯೋತಿ ಬಿಳಿಜಾಡರ ನಿರೂಪಿಸಿದರು. ಸಂಂ-ಯೋಜಕಎಂ.ಡಿ.ಕೋರವಾರಇದ್ದರು.

# ಕಲ್ಯಾಣ ಕನ್ನಡ ಉತ್ಸವ ಹಾಗೂ ಮಕ್ಕಳ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಶಾಸಕ ಕಾಶಪ್ಪನವರ

**ಬಾಗಲಕೋಟೆ (ಇಳಕಲ್) :** ನಗರದ ವಿಜಯ ಮಾಹಾಂತೇಶ ಮಠದ ದಾಸೋಹ ಭವನದಲ್ಲಿ ರಾಜ್ಯದ ವಿವಿಧ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರಿಗೆ ಗೌರವ ಸನ್ಮಾನ ಹಾಗೂ ಸ್ಥಳೀಯ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಕರುನಾಡು ಹಣತೆ ಕವಿ ಬಳಗ ರಾಜ್ಯ ಕೇಂದ್ರ ಘಟಕ ಚಿತ್ರದುರ್ಗ. ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ತಾಲೂಕ್ ಘಟಕ ಇಳಕಲ್ ಇವರ ಸಂಂ-ಯೋಗದಲ್ಲಿ ಕಲ್ಯಾಣ ಕನ್ನಡೋತ್ಸವ ಹಾಗೂ ಮಕ್ಕಳ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮ ಹಾಗೂ ವಾರ್ಷಿಕೋತ್ಸವ ಸಮಾರಂಭ ಎರಡು ಕೃತಿಗಳ ಲೋಕಾರ್ಪಣೆಯ ಸಮಾರಂಭವನ್ನು ಶಾಸಕ ವಿಜಯಾನಂದ ಕಾಶಪ್ಪನವರ ಹಾಗೂ ಪೂಜ್ಯರಾದ ಗುರುಮಹಾಂತ ಸ್ವಾಮೀಜಿ ಅವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.




ಸಮಾರಂಭದ ದಿವ್ಯ ಸಾನಿಧ್ಯವನ್ನು ಡಾ.ಚನ್ನಬಸವ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿಗಳವರು ನಂದವಾಡಗಿ. ಶ್ರೀ ಮ,ನಿ,ಪ್ರ, ಚನ್ನ ವೀರೇಶ್ವರ ಮಹಾಸ್ವಾಮೀ-ಜಿಗಳವರು ವಿರಕ್ತ ಮಠ ಕೊಣ್ಣೂರು ವಹಿಸಿದ್ದರು.ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ವಿಜಯಾನಂದ ಕಾಶಪ್ಪನವರ ನಗರ ಕಲಾವಿದರ ತವರೂರು ಅದರಂತೆ ಸಾಹಿತಿಗಳ ಕವಿಗಳ ತವರೂರಾಗಿದೆ. ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮಕ್ಕಳಲ್ಲಿ ಕನ್ನಡ ಸಾಹಿತ್ಯವನ್ನು ಪಸರಿಸುವ ಕಾರ್ಯ ಉತ್ತಮವಾಗಿ ನಡೆಯುತ್ತಿದೆ. ಅಲ್ಲದೆ ಹೆಚ್‌ಎಸ್ ಗೌಡರ ಅವರ ಎರಡು ಕೃತಿಗಳ ಲೋಕಾರ್ಪಣೆ ಗೊಳಿಸಿದ್ದು, ಇವರ ಬರವಣಿಗೆ ಹೀಗೆ ಸಾಗಲಿ ಎಂದು ಮಾತನಾಡಿದರು. ಈ ಸಂದರ್ಭದಲ್ಲಿ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಸಾಹಿತಿಗಳು, ಸಾಧಕರು , ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸಾಧಕರಿಗೆ ಸತ್ಕಾರ ಸಮಾರಂಭ ವಿವಿಧ ಪ್ರಶಸ್ತಿಗಳ ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯಿತು.

# ಶಾಲಾ ಸಂಸತ್ ರಚನೆ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುತ್ತದೆ: ಡಾ.ಟಿ.ಹೆಚ್.ಸನಗಿನ

**ಬಾಗಲಕೋಟೆ :** ಇಂದಿನ ಮಕ್ಕಳೇ ನಾಳಿನ ನಾಗರಿಕರುದೇಶದಭವಿಷ್ಯವನ್ನುರೂಪಿಸುವಲ್ಲಿ ನಾಯಕತ್ವ ಗುಣ ಪ್ರಮುಖ ಪಾತ್ರವಹಿಸುತ್ತದೆ ಪ್ರತಿ ಶಾಲೆಗಳಲ್ಲಿ ಶಾಲಾ ಸಂಸತ್ ರಚನೆಯು ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುತ್ತದೆಂದು ಶ್ರೀ ಹುಚ್ಚೇಶ್ವರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಶಿಕ್ಷಣ ಹಾಗೂ ಗ್ರಾಮ ನಗರಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಟಿ.ಹೆಚ್.ಸನಗಿನ ಶಾಲಾ ಮಕ್ಕಳನ್ನುದ್ದೇಶಿಸಿ ಮಾತನಾಡಿದರು.



ತಾಲೂಕಿನ ಗದ್ದನಕೇರಿ ಗ್ರಾಮದ ಶ್ರೀ ಹುಚ್ಚೇಶ್ವರ ಪೂರ್ವ ಹಾಗೂ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ನಡೆದ ಶಾಲಾ ಸಂಸತ್ ರಚನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಪ್ರಜಾ ಪ್ರಭುತ್ವ ನಿಂತಿರುವುದೇ ಮತದಾನದ ಮೇಲೆ, ನಮ್ಮ ರಾಷ್ಟ್ರದ ಆಡಳಿತ ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ ಕಾಲಕಾಲಕ್ಕೆಚುನಾವಣೆಗಳುನಡೆಯುತ್ತಿರಬೇಕು ಜವಬ್ದಾರಿಯುತ ನಾಯಕರನ್ನು ಆಯ್ಕೆ ಮಾಡುವುದು ಮತದಾರ ಪ್ರಭುಗಳ ಕೈಯಲ್ಲಿದೆ ಎಂದು ಹೇಳಿದರು.

ಶಾಲಾ ಚುನಾವಣೆ ಪ್ರಕ್ರಿಯೆ ಮತ್ತು ಹಂತಗಳ ಕುರಿತು ಚುನಾವಣೆ ಮುಖ್ಯ ಅಧಿಕಾರಿಯಾಗಿ ಮುಖ್ಯಗುರುಮಾತೆ ಎಮ್.ಟಿ.ಸನಗಿನ ತಿಳಿಸಿದರು. ಶಾಲಾ ಕೊಠಡಿಗಳಲ್ಲಿ ಚುನಾವಣೆ ಭೂತನಿರ್ಮಾಣಮಾಡಿಮಕ್ಕಳನ್ನುಪೋಲೀಸ್ ಹಾಗೂ ಆರ್ಮಿ ಸಿಬ್ಬಂಧಿಯನ್ನು ರಚನೆ ಮಾಡಿ ಎಲ್ಲಶಿಕ್ಷಕಸಿಬ್ಬಂಧಿವರ್ಗದವರನ್ನುಪೋಲ್‌ಗಳ ಅಧಿಕಾರ ಹಾಗೂ ವಿವಿಧ ಅಧಿಕಾರ ನೀಡಿ ಚುನಾವಣೆಯನ್ನು ಯಶಸ್ವಿಗೊಳಿಸಲಾಯಿತು. ಮಕ್ಕಳಲ್ಲಿ ಚುನಾವಣೆ ಹಾಗೂ ಸಂಸತ್ ರಚನೆ ಕುರಿತು ಸಂಪೂರ್ಣ ಜ್ಞಾನ, ತಿಳುವಳಿಕೆ ನೀಡಲಾಯಿತು.

ಶಾಲಾ ಸಂಸತ್ ನಲ್ಲಿ ಪ್ರಧಾನ ಮಂತ್ರಿಯನ್ನಾಗಿ ಪ್ರತಿಭಾ ಕುಂಬಾರ, ಉಪ ಪ್ರಧಾನ ಮಂತ್ರಿ ಪ್ರವೀಣ ಲೆಂಕೆಪ್ಪನವರ ಹಾಗೂ ಮಹಿಳಾ ಪ್ರತಿನಿಧಿ ಕವಿತಾ ಗಣಕುಮಾರಮಠ, ಶಿಕ್ಷಣ ಮಂತ್ರಿ ಜೋಶ್ಮಿತಾ ಕೊಪ್ಪಳ, ಕ್ರೀಡಾ ಮಂತ್ರಿ ಪ್ರದೀಪ ಪಾಟೀಲ, ಸಾಂಸ್ಕೃತಿಕ ಮಂತ್ರಿ ಲಕ್ಷ್ಮೀ ಕುಂಬಾರ, ಶಿಸ್ತು ಮಂತ್ರಿ ವೀಣಾ ಗಣ-ಕುಮಾರಮಠ, ಹಣಕಾಸು ಮಂತ್ರಿ ಸುಸ್ಮಿತಾ ಬೂದಿಹಾಳ, ಆರೋಗ್ಯ ಮಂತ್ರಿ ಪ್ರೀತಮ ಗು-ರಿಕಾರ, ಪ್ರವಾಸ ಮಂತ್ರಿ ಐಶ್ವರ್ಯ ಹಿರೇಮಠ ಹೀಗೆ ಮಂತ್ರಿಮಂಡಲ ರಚಿಸಿ ಪ್ರಮಾಣ ವಚನ ಬೋಧಿಸಲಾಯಿತು. ಪ್ರತಿಯೊಂದು ಹುದ್ದೆಗೂ ಮಾರ್ಗದರ್ಶಕ ಶಿಕ್ಷಕರನ್ನು ಆಯ್ಕೆಮಾಡಲಾಯಿತು.

### ಅಕ್ಕಮಹಾದೇವಿ ಮಹಿಳಾ ವಿದ್ಯಾಲಯದಲ್ಲಿ ಸಾಫ್ಟ್ ಸ್ಕಿಲ್ಸ ಹಾಗೂ ವೃತ್ತಿಪರ ತರಬೇತಿ

# ಸಾಫ್ಟ್ ಸ್ಕಿಲ್ಸ ಹಾಗೂ ವೃತ್ತಿಪರ ತರಬೇತಿಯಿಂದ ಆತ್ಮವಿಶ್ವಾಸ: ಪವಿತ್ರ ಎಲ್.

**ಬಾಗಲಕೋಟೆ :** ವಿದ್ಯಾರ್ಥಿಗಳು ಸಾಫ್ಟ್ ಸ್ಕಿಲ್ಸ ಹಾಗೂ ವೃತ್ತಿಪರ ತರಬೈತಿಗಳಲ್ಲಿ ಪಾಲ್ಗೊಳ್ಳುವುದರುಂದ ಆತ್ಮವಿಶ್ವಾಸ ಹೆಚ್ಚುತ್ತದೆ ಎಂದುಹೈದರಾಬಾದಿನನಾಂದಿಫೌಂಡೇಶನದ ತರಬೇತಿದಾರ ಪವಿತ್ರ ಎಲ್ ಹೇಳಿದರು.




ಅವರು ನಗರದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿಐಕ್ಯೂಎಸಿಹಾಗೂವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಘಟಕಗಳ ವತಿಯಿಂದ 6 ದಿನಗಳ ಔದ್ಯೋಗಿಕ ಕೌಶಲ್ಯ ಅಭಿವೃದ್ಧಿ ತರಬೇತಿಯ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಅತ್ಯುತ್ತಮವಾದ ಹವ್ಯಾಸಗಳನ್ನು ವಿದ್ಯಾರ್ಥಿನಿಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಅಂದಾಗ ಮಾತ್ರ ವಿದ್ಯಾರ್ಥಿಗಳು ಉನ್ನತ ಸ್ಥಾನವನ್ನು ಪಡೆಯಲು ಸಾಧ್ಯವಿದೆ, ಸಮಯ ಪಾಲನೆ, ಮಾನಸಿಕ ಒತ್ತಡ ನಿರ್ವಹಣೆ, ಸಂದರ್ಶನ ತಯಾರಿಗೆ ವೃತ್ತಿತರಬೇತಿಗಳು ಅಗತ್ಯವಾಗಿದ್ದು, ವಿದ್ಯಾರ್ಥಿಗಳು ಸಾಫ್ಟ್ ಸ್ಕಿಲ್ಸ ಹಾಗೂ ವೃತ್ತಿಪರ ತರಬೈತಿಗಳಲ್ಲಿ ಪಾಲ್ಗೊಳ್ಳುವುದರುಂದ ಆತ್ಮವಿಶ್ವಾಸ ಹೆಚ್ಚುತ್ತದೆ ಎಚಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯ-ಎಸ್.ಜೆ. ಒಡೆಯರ ಅವರು ಮಾತನಾಡಿ ವಿದ್ಯಾರ್ಥಿಯರು ತಮ್ಮ ವಿಶ್ವಾಸವನ್ನು ಬೆಳೆಸಿಕೊಳ್ಳುವುದರ ಜೊತೆಗೆ ಸ್ವಾವಲಂಬಿ ಜೀವನ ನಡೆಸಲು ಸಹಾಯಕವಾಗುವ ಕೌಶಲ್ಯಗಳನ್ನು ಅರಿತುಕೊಳ್ಳಬೇಕು ಎಂದರು.

ಐಕ್ಯೂಎಸಿ ಸಂಯೋಜಕರಾದ ಶ್ರೀಮತಿ ಪಿ.ಕೆ. ಚೌಗುಲಾ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಕುಮಾರಿ ಸ್ಪಂದನ ಪತ್ತಾರ ಪ್ರಾರ್ಥಿಸಿದರು.

ಉದ್ಯೋಗ ಘಟಕದ ಸಂಯೋಜ-ಕರಾದ ಶ್ರೀಮತಿ ಶ್ರೀಲತಾ ಮುರಗೋಡು ಸ್ವಾಗತಿಸಿ ಪರಿಚಯಿಸಿದರು, ಸೀಮಾ ಚೌಸ ನಿರೂಪಿಸಿದರು.

# 102 ಕೆಜಿ ಭಾರದ ಜೋಳದ ಚೀಲಹೊತ್ತು ಅಂಜನಾದ್ರಿ ಬೆಟ್ಟ ಏರಿದ 61ರ ಭಕ್ತ

**ಗಂಗಾವತಿ :** ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಹನ್ನೂರ ಗ್ರಾಮದ ನಿಂಗಪ್ಪ ಸವಣೂರ ಎನ್ನುವ 61 ವರ್ಷದ ವ್ಯಕ್ತಿ 102 ಕೆ.ಜಿ. ತೂಕದ ಜೋಳದಮೂಟೆಬೆನ್ನಮೇಲೆಹೊತ್ತು ಮಂಗಳವಾರ 575 ಮೆಟ್ಟಿಲುಗಳು ಇರುವ ತಾಲ್ಲೂಕಿನ ಅಂಜನಾದ್ರಿಯ ಬೆಟ್ಟವನ್ನು ಏರಿದ್ದಾರೆ.



ಬೆಟ್ಟದ ಕೆಳಭಾಗದಲ್ಲಿರುವ ಪಾದಗಟ್ಟೆಗೆ ನಮಸ್ಕರಿಸಿ ಮೂಟೆ ಹೊತ್ತ ನಿಂಗಪ್ಪ ಎಲ್ಲಿಯೂ ನಿಲ್ಲದೇ ಒಂದು ತಾಸು ಎರಡು ನಿಮಿಷದಲ್ಲಿ ಶ್ರೀರಾಮ ಹಾಗೂ ಹನುಮನ ಸ್ಮರಣೆ ಮಾಡುತ್ತ ಬೆಟ್ಟ ಏರಿದರು. ನಂತರ ಜೋಳವನ್ನು ದೇವಸ್ಥಾನಕ್ಕೆ ಅರ್ಪಿಸಿ ದರ್ಶನ ಪಡೆದರು.

ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ನಿಂಗಪ್ಪ 'ಹಿಂದೆ ಶ್ರೀಶೈಲದಿಂದ ಅಂಜನಾದ್ರಿಗೆ ಬಂದಾಗ ಜೋಳದ ಮೂಟೆ ಹೊತ್ತು ಮುಂದೊಂದು ದಿನ ಬೆಟ್ಟ ಏರುವುದಾಗಿ ಹರಕೆ ಕಟ್ಟಿಕೊಂಡಿದ್ದೆ. ಈಗ ಆ ಬೇಡಿಕೆ ಈಡೇರಿದೆ. ದೇವರು ಆರೋಗ್ಯ ಚೆನ್ನಾಗಿ ಇಟ್ಟಿರುವುದರಿಂದಲೇ ಬೆಟ್ಟ ಏರಲು ಸಾಧ್ಯವಾಗಿದೆ' ಎಂದು ಸಂತೋಷ ವ್ಯಕ್ತಪಡಿಸಿದರು.

# ಅಗ್ನಿ ದುರಂತದಲ್ಲಿ ಗಂಭೀರ ಗಾಯಗೊಂಡಿದ್ದ ವಿಕಲಚೇತನ ಸಾವು

**ಕೊಪ್ಪಳ :** ಕೊಪ್ಪಳ ತಾಲೂಕಿನ ಗುಳದಳ್ಳಿಯಲ್ಲಿ ನಿನ್ನೆ ಸಂಭವಿಸಿದ ಭೀಕರ ಅಗ್ನಿ ದುರಂತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ವಿಕಲಚೇತನ ಸೋಮಪ್ಪ ಬೆಣ್ಣಿ (35) ಇಂದು ಚಿಕಿತ್ಸೆ ಫಲಕಾರಿಯಾಗದೆ ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

**ಘಟನೆ ವಿವರ:**

ನಿನ್ನೆ ಸಂಜೆ ಹುಲಿಗೆಮ್ಮ ಬೆಣ್ಣಿ ಎಂಬುವರ ಮನೆಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿತ್ತು. ಬೆಂಕಿಯ ಕೆನ್ನಾಲಗೆ ತೀವ್ರವಾಗಿ ಹರಡಿದ್ದರಿಂದ ಮನೆಯ ಸಂಪೂರ್ಣ ಸುಟ್ಟು ಭಸ್ಮವಾಗಿದೆ. ಈ ದುರಂತದಲ್ಲಿ ಹುಲಿಗೆಮ್ಮರ ಮಗ ವಿಕಲಚೇತನ ಸೋಮಪ್ಪ ಬೆಣ್ಣಿ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಕೊಪ್ಪಳ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತಾದರೂ, ತೀವ್ರವಾದ ಸುಟ್ಟಗಾಯಗಳಿಂದಾಗಿಚಿಕಿತ್ಸೆಗೆಸ್ಪಂದಿಸದೆಸೋಮಪ್ಪ ಮೃತಪಟ್ಟಿದ್ದಾರೆ.

# ಸಂತೆಗೆ ಮಳೆ ಸಂಕಷ್ಟ



**ಮುನಿರಾಬಾದ್ :** ಕಳೆದ ನಾಲ್ಕೈದು ದಿನಗಳಿಂದ ನಿರಂತರವಾಗಿ ಸಂಜೆ ಸಮಯದಲ್ಲಿ ಬರುತ್ತಿರುವ ಮಳೆಯ ಪರಿಣಾಮ ಗ್ರಾಮೀಣ ಪ್ರದೇಶದ ವಾರದ ಸಂತೆಯ ವ್ಯಾಪಾರಿಗಳು ಮತ್ತು ಗ್ರಾಹಕರಿಗೆ ಸಂಕಷ್ಟ ತಂದಿದೆ.

ಗ್ರಾಮೀಣ ಪ್ರದೇಶದ ನಾಗರಿಕರು ತಮ್ಮ ದಿನಸಿ ಮತ್ತು ತರಕಾರಿ ಖರೀದಿಗೆ ಹೆಚ್ಚಾಗಿ ವಾರದ ಸಂತೆಯನ್ನು ಅವಲಂಬಿಸಿದ್ದಾರೆ. ಆದರೆ ಕಳೆದ ಶನಿವಾರದಿಂದ ನಿರಂತರವಾಗಿ ಸಂಜೆ ಸಮಯದಲ್ಲಿ ಮಾತ್ರ ಬರುತ್ತಿರುವ ಮಳೆ ಗ್ರಾಹಕರು ಸೇರಿದಂತೆ ವ್ಯಾಪಾರಿಗಳನ್ನು ಸಂಕಷ್ಟಕ್ಕೆ ಈಡು ಮಾಡುತ್ತಿದೆ.

ಕೆಲವು ರೈತರು ತಾವು ಬೆಳೆದ ತರಕಾರಿಯನ್ನು ದೂರದ ಹೊಸಪೇಟೆ ಮತ್ತು ಕೊಪ್ಪಳದ ಮಾರುಕಟ್ಟೆಗೆ ಸಾಗಿಸದೇ, ವಿವಿಧ ಊರುಗಳ ಸಂತೆಯಲ್ಲಿ ಮಾರಾಟ ಮಾಡುವ ಪದ್ಧತಿ ಅಳವಡಿಸಿಕೊಂಡಿದ್ದಾರೆ. ಸುತ್ತಲಿನ ಕಾರ್ಖಾನೆಯ ಕಾರ್ಮಿಕರು ಕೃಷಿ ಕೂಲಿ ಕಾರ್ಮಿಕರು ಗ್ರಾಮೀಣ ಸಂತೆಯನ್ನು ಅವಲಂಬಿಸಿದ್ದಾರೆ. ನಾಲ್ಕೈದು ದಿನ ಸಂಜೆಯ ಮಳೆ ಪರಿಣಾಮ ವ್ಯಾಪಾರ ಅಸ್ತವ್ಯಸ್ತವಾಗಿದೆ ಎನ್ನುತ್ತಾರೆ ಬೇವಿನಹಳ್ಳಿ ಗ್ರಾಮದ ರೈತ ಮುದುಕಪ್ಪ. ಹುಲಿಗಿ ಗ್ರಾಮದಲ್ಲಿ ಮಂಗಳವಾರ ನಡೆದ ವಾರದ ಸಂತೆಯಲ್ಲಿ ವ್ಯಾಪಾರಿಗಳು ಮತ್ತು ಗ್ರಾಹಕರು ಪ್ಲಾಸ್ಟಿಕ್ ಹಾಳೆ, ಛತ್ರಿ ಹಿಡಿದು ವ್ಯಾಪಾರ ಮಾಡಿದರು.

ಶನಿವಾರ ಬೇವಿನಹಳ್ಳಿ, ಭಾನುವಾರ ಹೊಸಹಳ್ಳಿ, ಸೋಮವಾರ ಹಿಟ್ನಾಳ ಹಾಗೂ ಮಂಗಳವಾರ ಹುಲಿಗಿ ಗ್ರಾಮದ ವಾರದ ಸಂತೆ ಸಂಜೆಯ ಮಳೆಗೆ ಅಸ್ತ ವ್ಯಸ್ತಗೊಂಡಿದ್ದು, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಪರದಾಡುವಂತಾಗಿದೆ.

# UPI ಅಧಿಕ ವಹಿವಾಟು ನಡೆಸಿದ ಕೊಪ್ಪಳದ 28 ವ್ಯಾಪಾರಿಗಳಿಗೆ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್! ಮುಂದೇನು ಕ್ರಮ

**ಕೊಪ್ಪಳ :** ಗೂಗಲ್ ಪೇ, ಫೋನ್ ಪೇ ಸೇರಿದಂತೆ ಯುಪಿಐ ಮೂಲಕ ಹಣ ಸ್ವೀಕರಿಸಿ, ಜಿಎಸ್‌ಟಿ ಮಿತಿ ದಾಟಿದವರಿಗೆ ಜಿಲ್ಲೆಯಲ್ಲಿಯೂ ನೋಟಿಸ್ ಜಾರಿ ಮಾಡಲಾಗಿದೆ.

ಕೊಪ್ಪಳದಲ್ಲಿರುವ ವಾಣಿಜ್ಯ ತೆರಿಗೆ ಇಲಾಖೆಯಿಂದ ಕೊಪ್ಪಳ, ಕೂಕನೂರು, ಕುಷ್ಟಗಿ ಹಾಗೂ ಯಲಬುರ್ಗಾ ತಾಲೂಕಿನ ವ್ಯಾಪ್ತಿಯಲ್ಲಿ 40 ಲಕ್ಷ ರೂ. ವಹಿವಾಟು ಮೀರಿದ ಹಿನ್ನಲೆ 28 ಜನರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಉಳಿದಂತೆ ಗಂಗಾವತಿ, ಕಾರಟಗಿ, ಕನಕಗಿರಿಯ ವ್ಯಾಪ್ತಿಯಲ್ಲಿ ಅನೇಕ ವ್ಯಾಪಾರಸ್ಥರಿಗೆ ನೋಟಿಸ್ ಜಾರಿ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.




ಯುಎಇಗೆಪ್ರತಿವರ್ಷ70ಲಕ್ಷಭಾರತೀಯರ ಭೇಟಿ, ಯುಪಿಐ ಪಾವತಿ ವ್ಯವಸ್ಥೆ ವಿಸ್ತರಣೆಗೆ ಎನ್‌ಪಿಸಿಐ ಸಾಥ್

**40 ಲಕ್ಷ ರೂಪಾಯಿ ವಹಿವಾಟು ಮೀರಿದ್ದಕ್ಕೆ ನೋಟಿಸ್**

ಯುಪಿಐ ಮೂಲಕ 40 ಲಕ್ಷ ರೂಪಾಯಿಗೂ ಅಧಿಕ ಹಣ ಸ್ವೀಕಾರ ಮಾಡಿರುವುದರ ಆಧಾರದ ಮೇಲೆ ನೋಟಿಸ್ ಜಾರಿ ಮಾಡಲಾಗಿದ್ದು, ವಿವರಣೆ ಜತೆಗೆ ಜಿಎಸ್ ಟಿ ಪಾವತಿಸುವಂತೆ ಸೂಚಿಸಲಾಗಿದೆ. ಜಿಲ್ಲಾದ್ಯಂತ ಲಿಕ್ಕರ್ ಹಾಗೂ ಪೆಟ್ರೋಲ್ ವ್ಯಾಪಾರಸ್ಥರಿಗೆ ಅಧಿಕ ನೋಟಿಸ್ ಜಾರಿಯಾಗಿದ್ದು, ಉಳಿದಂತೆ ಸಣ್ಣ-ಪುಟ್ಟ ವ್ಯಾಪಾರಸ್ಥರಿಗೂ ನೋಟಿಸ್ ಜಾರಿ ಮಾಡಲಾಗಿದೆ.

ಈ ಪೈಕಿ 12 ಜನರು ನೋಟಿಸ್ ಗೆ ಮರಳಿ ಪತ್ರದ ಮುಖೇನ ವಿವರಣೆ ನೀಡಿದ್ದಾರೆ.

ನೋಟಿಸ್ ಜಾರಿಯಿಂದ ವ್ಯಾಪಾರಸ್ಥರು ಆತಂಕಗೊಂಡಿದ್ದು, ಚಾರ್ಟೆಡ್ ಅಕೌಂಟೆಂಟ್ ಬಳಿಗೆ ತೆರಳಿ ಮುಂದೆ ಏನು ಮಾಡಬೇಕು ಎಂದು ವಿಚಾರಿಸುತ್ತಿದ್ದಾರೆ. ಸೇವಾ ವಲಯದಲ್ಲಿರುವವರು 20 ಲಕ್ಷ ರೂ. ದಾಟಿದರೇ ಮತ್ತು ಗೂಡ್ಸ್ ವ್ಯಾಪಾರ ಮಾಡುವವರು 40 ಲಕ್ಷ ರೂಪಾಯಿ ದಾಟಿದರೇ ಜಿಎಸ್ ಟಿ ವ್ಯಾಪ್ತಿಗೆ ಬರುತ್ತಾರೆ. ಹೀಗಾಗಿ, ಬಂದಿರುವ ನೋಟಿಸ್ ಅನ್ವಯ ತಮ್ಮ ವಿವರಣೆಯನ್ನು ನೀಡಬೇಕು ಮತ್ತು ಅದು ನಿಯಮಾನುಸಾರ ಆಗದಿದ್ದರೇ ಜಿಎಸ್ ಟಿ ಪಾವತಿಸಬೇಕಾಗುತ್ತದೆ. (ಹಾವೇರಿಯಲ್ಲಿಯು ತೆರಿಗೆ ಇಲಾಖೆ ನೋಟಿಸ್)

**ಗಾಬರಿ ಬೇಡ ವಿವರಣೆ ನೀಡಿದರೆ ಸಮಸ್ಯೆಯಾಗಲ್ಲ**

ವ್ಯಾಪಾರಸ್ಥರು ನೋಟಿಸ್ ಬಂದಾಕ್ಷಣ ಗಾಬರಿ ಪಡಬೇಕಿಲ್ಲ. ನಿಯಮಾನುಸಾರ ವಿವರಣೆಯನ್ನು ನೀಡಿದರೇ ಸಮಸ್ಯೆಯಿಲ್ಲ. ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕೂಕನೂರು ತಾಲೂಕು ವ್ಯಾಪ್ತಿಯಲ್ಲಿ ಈವರೆಗೆ 28 ಜನರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಕೊಪ್ಪಳದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ ಸುರೇಶ್ ತಿಳಿಸಿದ್ದಾರೆ.

# ಜಾನುವಾರುಗಳೊಂದಿಗೆ ಡಿಸಿ ಕಚೇರಿ ಮುಂದೆ ಪ್ರತಿಭಟನೆ

**ಕೊಪ್ಪಳ :** ಕೊಪ್ಪಳ ಸಮೀಪದಲ್ಲಿ ಬಲ್ಡೋಟಾ ಕಂಪನಿಯು ಬಸಾಪುರ ಕೆರೆ ಅತಿಕ್ರಮ ಖಂಡಿಸಿ ಕೆರೆ ಸುತ್ತ ಕಾಂಪೌಂಡ್ ನಿರ್ಮಾಣ ವಿರೋಧಿಸಿ ಜಿಲ್ಲಾ ಸಮಿತಿ ಹಾಗೂ ಪರಿಸರ ಹಿತ ರಕ್ಷಣಾ ಸಮಿತಿ ಜಂಟಿ ಕ್ರಿಯಾ ವೇದಿಕೆಯಿಂದ ನಗರದ ಡಿಸಿ ಕಚೇರಿ ಮುಂದೆ

ನೂರಾರು ಜಾನುವಾರುಗಳೊಂದಿಗೆ ಸಂಘಟನೆ ಮುಖಂಡರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.



ಕೊಪ್ಪಳ ತಾಲೂಕಿನ ಬಸಾಪುರ ಬಳಿ ಬಲ್ಡೋಟ ಕಂಪನಿಯು ಸಾರ್ವಜನಿಕ ಉಪಯೋಗಕ್ಕೆ ಇರುವ ಕೆರೆಯನ್ನು ಅತಿಕ್ರಮಸಿ ಕೆರೆಯ ಸುತ್ತಲೂ ಕಾಂಪೌಂಡ್ ನಿರ್ಮಾಣ ಮಾಡಿ ಸಾರ್ವಜನಿಕ ಬಳಕೆಗೆ ಅವಕಾಶವಿಲ್ಲದಂತೆ ನಿರ್ಬಂಧಿಸಿದೆ.

ಈ ಮೊದಲು 40 ಎಕರೆ ವಿಸ್ತಾರದ ಕೆರೆಯಲ್ಲಿ ಸುತ್ತಲಿನ ಹತ್ತಾರು ಹಳ್ಳಿಗಳ ರೈತರ ಜಾನುವಾರುಗಳು ನೀರನ್ನು ಕುಡಿಯುತ್ತಿದ್ದವು. ಆದರೆ ಕಂಪನಿಯು ತನ್ನ ಹೊಸ ಕಾರ್ಖಾನೆ ಸ್ಥಾಪನೆಯ ಉದ್ದೇಶದಿಂದ ಕೆರೆಯ ವ್ಯಾಪ್ತಿಯನ್ನು ಒಳಗೊಂಡಂತೆ ಬೃಹದಾಕಾರದಲ್ಲಿ ಕಾಂಪೌಂಡನ್ನು ನಿರ್ಮಿಸಿಕೊಂಡಿದೆ.

ಹೈಕೋರ್ಟ್ ನಿರ್ದೇಶನವಿದ್ದರೂ ಸಹಿತ ಬಸಾಪುರ ಕೆರೆಯನ್ನು ಸಾರ್ವಜನಿಕರ ಬಳಕೆಗೆ ಬಿಡದೆ ಜನ ಹಾಗೂ ಜಾನುವಾರುಗಳಿಗೆ ತುಂಬಾ ತೊಂದರೆಯನ್ನುಂಟು ಮಾಡುತ್ತಿದೆ.

ಈ ಕೂಡಲೇ ಜಿಲ್ಲಾಡವು ಸಾರ್ವಜನಿಕ ಬಳಕೆಗೆ ಇರುವ ಕೆರೆಯನ್ನು ಜನಜಾನುವಾರುಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿ ನೂರಾರು ಜಾನುವಾರುಗಳೊಂದಿಗೆ ಜಿಲ್ಲಾ ಬಚಾವೋ ಆಂದೋಲನ ಸಮಿತಿಯ ಮುಖಂಡರು ಹಾಗೂ ರೈತ ಮುಖಂಡರು ಬಸಾಪುರ ಗ್ರಾಮದ ಮುಖಂಡರು ನಗರದ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಬಲ್ಡೋಟಾ ವಿರುದ್ದ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಎಸಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಅವರು ಆಗಮಿಸಿ ಹೋರಾಟಗಾರರ ಮನವಿ ಸ್ವೀಕರಿಸಿ ಸಮಸ್ಯೆ ಆಲಿಸಿದರು.

# ಬಿಸಿಯೂಟ ಸೇವಿಸಿ 24 ಮಕ್ಕಳು ಅಸ್ವಸ್ಥ: ನಾಲ್ವರು ನಿತ್ರಾಣ

**ಬೆಳಗಾವಿ :** ತಾಲ್ಲೂಕಿನ ಮಾರ್ಕಂಡೇಯ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿಮಧ್ಯಾಹ್ನದಬಿಸಿಯೂಟಸೇವಿಸಿ 24 ಮಕ್ಕಳು ಅಸ್ವಸ್ಥಗೊಂಡಿದ್ದಾರೆ. ನಾಲ್ವರು ಹೆಚ್ಚು ನಿತ್ರಾಣಗೊಂಡಿದ್ದರಿಂದ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರಿಗೆ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.



ಎಲ್ಲ ಮಕ್ಕಳೂ ಮಧ್ಯಾಹ್ನ ಬಿಸಿಯೂಟ ಸೇವಿಸಿದ ಕೆಲವೇ ನಿಮಿಷಗಳಲ್ಲಿ ಅಸ್ವಸ್ಥರಾದರು. ಕೆಲವರಿಗೆ ವಾಂತಿ, ಭೇದಿ ಕಾಣಿಸಿಕೊಂಡಿತು. ಶಿಕ್ಷಕರು ಒಬ್ಬೊಬ್ಬರನ್ನಾಗಿ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಿದರು. ಸಾಮೂಹಿಕವಾಗಿ ಎಲ್ಲರಿಗೂ ಹೊಟ್ಟೆನೋವು ಕಾಣಿಸಿಕೊಳ್ಳಲು ಆರಂಭಿಸಿದ್ದರಿಂದ ಆಂಬುಲೆನ್ಸ್‌ಗಳನ್ನು ಕರೆಸಲಾಯಿತು.

ಡಿಡಿಪಿಐ ಲೀಲಾವತಿ ಹಿರೇಮಠ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಈಶ್ವರ ಗಡಾದಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

24 ಮಕ್ಕಳ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಆಸ್ಪತ್ರೆಗೆ ದಾಖಲಿಸಿ, ಇನ್ನೂ ಚಿಕಿತ್ಸೆ ಕೊಡಿಸಲಾಗುತ್ತಿದೆ. ಅಪಾಯ ಏನೂ ಇಲ್ಲ' ಎಂದು ಲೀಲಾವತಿ ಮಾಹಿತಿ ನೀಡಿದರು.

ಬಿಸಿಯೂಟದಲ್ಲಿ ಹಲ್ಲಿ ಬಿದ್ದಿರುವ ಸಾಧ್ಯತೆ ಇದೆ ಎಂದು ಬೆಳಗಾವಿ ಗ್ರಾಮೀಣ ಠಾಣೆ ಪೊಲೀಸರು ಮಾಹಿತಿ ನೀಡಿದ್ದಾರೆ.

ಮಹಿಳಾ ಸ್ವಸಹಾಯ ಸಂಘದವರು ಅಡುಗೆ ಮಾಡಿದ್ದಾರೆ. ಘಟನೆ ಕುರಿತಾಗಿ ಬುಧವಾರ ಸಮಗ್ರವಾಗಿ ವಿಚಾರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸುತ್ತೇವೆ' ಎಂದು ಪಿಎಂ? ಪೋಷಣ್ ಶಕ್ತಿ ನಿರ್ಮಾಣ ಯೋಜನೆ ಬೆಳಗಾವಿ ಶಿಕ್ಷಣಾಧಿಕಾರಿ ಲಕ್ಷ್ಮಣರಾವ್ ಯಕ್ಕುಂಡಿ ಹೇಳಿದರು.

# ಬಂಡಿಹಾಳ ಶಾಲೆಯಲ್ಲಿ ‘ಯು’ ಪ್ರಯೋಗ



**ಯಲಬುರ್ಗಾ :** ನೆರೆ ರಾಜ್ಯ ಕೇರಳದಲ್ಲಿ ಅಳವಡಿಸಿ ಜಾರಿಗೊಳಿಸಿದ್ದ ‘ಯು’ ಆಕಾರದ (ಲಾಸ್ಟ್ ಬೆಂಚ್ ಇಲ್ಲದ) ಆಸನದ ವ್ಯವಸ್ಥೆಯನ್ನು ತಾಲ್ಲೂಕಿನ ಬಂಡಿಹಾಳ ಗ್ರಾಮದ ಶಾಲೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದು ಕೊಪ್ಪಳ ಜಿಲ್ಲೆಯಲ್ಲೇ ಮೊದಲ ಪ್ರಯೋಗ ಎಂಬ ಹಗ್ಗಳಿಕೆಗೆ ಪಾತ್ರವಾಗಿದೆ.

ಕೇರಳದಲ್ಲಿಯ ಈ ವ್ಯವಸ್ಥೆ ಹೆಚ್ಚು ಪರಿಣಾಮಕಾರಿಯಾಗಿದ್ದರ ಬಗ್ಗೆ ವ್ಯಾಪಕವಾಗಿ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಶಿಕ್ಷಕರು ಆಸಕ್ತಿ ತೋರಿದ್ದು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೊದಲ ಮತ್ತು ಕೊನೆಯ ಬೆಂಚ್ ವಿದ್ಯಾರ್ಥಿ ಎಂಬುದರಲ್ಲಿ ಹೆಚ್ಚು ಕಡಿಮೆ ಎಂಬ ಭಾವನೆಗಳು ಮೂಡಬಾರದು, ಅನಗತ್ಯವಾದ ಭಿನ್ನತೆಯ ನಿವಾರಣೆ ಅಗತ್ಯವಿದೆ. ಪ್ರತಿ ವಿದ್ಯಾರ್ಥಿಯೂ ಒಂದೇ ರೀತಿಯಲ್ಲಿ ಕಾಣುವ ಉದ್ದೇಶ ಹಾಗೂ ವಿಶೇಷ ಗಮನ ಕೊಡಲು ಹೆಚ್ಚಿನ ಅವಕಾಶಗಳು ಈ ‘ಯು’ ಆಕಾರದ ವಿನ್ಯಾಸ ಆಸನ ವ್ಯವಸ್ಥೆಯಲ್ಲಿ ಕಂಡು ಬರುವುದರಿಂದ ಅಳವಡಿಸಲಾಗಿದೆ. ಇದು ನಿರೀಕ್ಷೆಗೂ ಮೀರಿ ಪರಿಣಾಮಕಾರಿಯಾಗಿದೆ. ಮುಖ್ಯವಾಗಿ ವಿದ್ಯಾರ್ಥಿಗಳು ಪಾಠದ ಕಡೆ ಹೆಚ್ಚು ಗಮನ ಕೊಡಲು ಸಾಧ್ಯವಾಗುತ್ತದೆ. ಶಿಕ್ಷಕರು ವಿದ್ಯಾರ್ಥಿ ಬಳಿ ಹೋಗಿಯೇ ಪ್ರತಿಯೊಂದನ್ನು ಪರೀಕ್ಷಿಸಲು, ಪರಿಶೀಲಸಲು ಸಾಧ್ಯವಾಗುತ್ತದೆ. ಈ ವಿನ್ಯಾಸವನ್ನು ಪ್ರತಿಯೊಂದು ಕೊಠಡಿಯಲ್ಲಿ ಅಳವಡಿಸುವುದು ಹೆಚ್ಚು ಪ್ರಯೋಜನಕಾರಿಯಾಗುತ್ತದೆ’ ಎಂದು ಮುಖ್ಯ ಶಿಕ್ಷಕ ಪರಸಪ್ಪ ಸೊಬಗಿನ ಅಭಿಪ್ರಾಯಪಟ್ಟಿದ್ದಾರೆ.

ಯು’ ಆಕಾರದಲ್ಲಿ ಮಕ್ಕಳನ್ನು ಕೂಡಿಸುವುದರಿಂದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಲಿದೆ. ಮುಖ್ಯವಾಗಿ ಶಿಕ್ಷಕರು ಚಲನಶೀಲರಾಗಿ ಪಾಠ ಮಾಡಲು ಹಾಗೂ ಮಕ್ಕಳು ಕೂಡಾ ಹೆಚ್ಚಿನ ಗಮನಕೊಟ್ಟು ಪಾಠ ಕಲಿಯಲು ಪ್ರೇರಣೆ ನೀಡುತ್ತದೆ. ಸರ್ಕಾರ ಅಗತ್ಯ ಸೌಲಭ್ಯ ಕಲ್ಪಿಸಿ ಇದೇ ಮಾದರಿಯನ್ನು ಕಡ್ಡಾಯಗೊಳಿಸಿದರೆ ಒಳ್ಳೆಯ ಬೆಳವಣಿಗೆ ಎಂದು ಗ್ರಾಮದ ಉಪನ್ಯಾಸಕ ಶಂಕರ ಬಂಡಿಹಾಳ ಅಭಿಪ್ರಾಯಪಟ್ಟಿದ್ದಾರೆ.

**ಭಿನ್ನತೆ ಇರಬಾರದು ಎಂಬ ಕಲ್ಪನೆ’**

ನಮ್ಮೂರ ಶಾಲೆಯ 8 9 10ನೇ ತರಗತಿಗಳಲ್ಲಿ ಹೊಸ‘ಯು’ಆಕಾರದಲ್ಲಿಮಕ್ಕಳನ್ನುಕೂಡಿಸಿ ಪಾಠ ಮಾಡುತ್ತಿರುವುದು ಈಗ ತಾಲ್ಲೂಕಿನಲ್ಲಿ ಜನಪ್ರಿಯವಾಗಿದೆ. ಈ ಮಾದರಿಯು ಮಕ್ಕಳಿಗೆ ಹೆಚ್ಚು ಅನುಕೂಲವಾದರೆ ಸಾರ್ಥಕವಾಗುತ್ತದೆ ಬಸವರಾಜ ಪಟ್ಟೇದ ಗ್ರಾಮಸ್ಥ ಒಂದೇ ಸೂರಿನ ಅಡಿಯಲ್ಲಿ ವಿದ್ಯಾರ್ಥಿಗಳ ಮಧ್ಯೆ ಭಿನ್ನತೆ ಇರಬಾರದು ಎಂಬ ಕಲ್ಪನೆ ಜತೆ ಮಕ್ಕಳ ಹತ್ತಿರದಲ್ಲಿದ್ದು ಪರಿಣಾಮಾಕಾರಿಯಾಗಿ ಪಾಠಮಾಡಲು ‘ಯು’ ವಿನ್ಯಾಸದಲ್ಲಿ ಸಾಧ್ಯವಾಗುವುದನ್ನು ಮನಗಂಡು ಅಳವಡಿಸಲಾಗಿದೆ ಪರಸಪ್ಪ ಸೊಬಗಿನ ಮುಖ್ಯಶಿಕ್ಷಕ ಸರ್ಕಾರಿ ಪ್ರೌಢಶಾಲೆ ಬಂಡಿಹಾಳ

# ಕೈಗಾರಿಕಾ ಇಲಾಖೆ ಅಧಿಕಾರಿ ಮನೆಗಳ ಮೇಲೆ ಲೋಕಾಯುಕ್ತರ ದಾಳಿ



**ಕೊಪ್ಪಳ :** ಆದಾಯ ಮೀರಿ ಆಸ್ತಿಗಳಿಸಿದ ಕುರಿತು ದೂರು ಬಂದಿದ್ದರಿಂದಇಲ್ಲಿನಜಿಲ್ಲಾಕೈಗಾರಿಕಾ ಇಲಾಖೆಯ ಉಪನಿರ್ದೇಶಕ ಎಸ್. ಎಂ. ಚೌಹಾಣ್ ಅವರ ಮನೆಗಳು ಮತ್ತು ಕಚೇರಿ ಮೇಲೆ ಬುಧವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಇಲ್ಲಿನ ಅಭಿಷೇಕ ನಗರ, ಭಾಗ್ಯನಗರ ವ್ಯಾಪ್ತಿಯಲ್ಲಿರುವ ಕೀರ್ತಿ ನಗರದಲ್ಲಿರುವ ಚೌಹಾಣ್ ಅವರ ಮನೆಯ ಮೇಲೆ ದಾಳಿ ಮಾಡಲಾಗಿದೆ.

ದಾಖಲೆಗಳ ಪರಿಶೀಲನೆಗಾಗಿ ಮನೆಗೆ ತೆರಳಿದ್ದಾಗ ಚೌಹಾಣ್ ಮಲಗಿದ್ದರು. ಇಲ್ಲಿನ ಅಭೀಷೇಕ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.

ಹುಬ್ಬಳ್ಳಿಯ ರಾಜೀವನಗರದ ದತ್ತಾತ್ರೇಯ ಕಾಲೋನಿಯಲ್ಲಿರುವ ಮನೆಯಲ್ಲಿಯೂ ದಾಖಲೆಗಳ ಶೋಧ ನಡೆದಿದೆ. ನಿವೇಶನಗಳಿಗೆ ಸಂಬಂಧಿಸಿದ ದಾಖಲೆಗಳು, 4 ಲಕ್ಷ ನಗದು ಮತ್ತು ಅಪಾರ ಪ್ರಮಾಣದ ಚಿನ್ನಾಭರಣ, ಬೆಳ್ಳಿಯ ವಸ್ತುಗಳು ಪತ್ತೆಯಾಗಿವೆ. ಪರಿಶೀಲನೆ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

# ಕುಡಿಯುವ ನೀರಿನ ಯೋಜನೆಗೆ 204 ಕೋಟಿ



**ಕನಕಗಿರಿ :** ಪಟ್ಟಣ ಹಾಗೂ ಕಾರಟಗಿ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಅನುಕೂಲ ಕಲ್ಪಿಸಲು ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿ ?204 ಕೋಟಿ ಅನುದಾನ ವ್ಂಂಜೂರಾಗಿದ್ದ್ದು, ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಂಯುೂ ಲಭಿಸಿದೆ.

ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿ ಈ ಕಾಮಗಾರಿ ನಡೆಯಲಿದ್ದು, ತುಂಗಭದ್ರಾ ಜಲಾಶಯದಿಂದ ಕನಕಗಿರಿ ಹಾಗೂ ಕಾರಟಗಿ ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಇದಾಗಿದೆ.

ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜುಮತ್ತುಒಳಚರಂಡಿಮಂಡಳಿವತಿಯಿಂದ ಕೈಗೆತ್ತಿಕೊಂಡಿದ್ದು, ಬೆಂಗಳೂರಿನ ಅಮೃತ ಕನ್‌ಸ್ಟ್ರಕ್ಷನ್ ಹಾಗೂ ಜಿ.ವಿ. ವಿತ್ ಮೆ. ಇನ್ಫ್ರಾಕಾನ್ ಸ್ಟೆಕ್ಟರ್ ಕಂಪನಿ ಗುತ್ತಿಗೆ ಪಡೆದುಕೊಂಡಿವೆ.

ಸಮೀಪದ ಬಂಕಾಪುರ ಗ್ರಾಮದ ಸೀಮೆಯಲ್ಲಿ ಬೃಹತ್ ಪ್ರಮಾಣದ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗುತ್ತಿದ್ದು, ಅಲ್ಲಿ ಆನ್‌ಲೈನ್ ಮೂಲಕವೇ ನೀರು ಪೂರೈಕೆಯ ನಿರ್ವಹಣೆ ಮೇಲೆ ಕಣ್ಗಾವಲು ವಹಿಸುವ ವ್ಯವಸ್ಥೆ ಮಾಡಲಾಗಿದೆ.


ಜಲಾಶಯದಿಂದ ನೀರನ್ನು 42.89 ಕಿ.ಮೀ ವರೆಗೆ 559 ಮಿ.ಮೀ ವ್ಯಾಸದ ಎಂ.ಎಸ್ ಕಚ್ಚಾ ನೀರಿನ ಏರು ಕೊಳವೆ ಮೂಲಕ ಶುದ್ಧೀಕರಣ ಘಟಕಕ್ಕೆ ಪೂರೈಕೆ ಮಾಡಿ ಶುದ್ಧೀಕರಿಸಿದ ನೀರನ್ನು ಪಟ್ಟಣದ ತೊಂಡೆತೇವರಪ್ಪ ದೇವಸ್ಥಾನದ ಪರಿಸರದಲ್ಲಿರುವ ಸಿಂಗ್ ಎಂಬುವವರ ಲೇಔಟ್ ಸಿಎ ನಿವೇಶನದಲ್ಲಿ ಹಾಗೂ ಸ್ವಾಮೇರ ಗದ್ದಿಯ ಜಾಗದಲ್ಲಿ ತಲಾ 10 ಲಕ್ಷ ಲೀಟರ್ ಸಂಗ್ರಹ ಸಾಮರ್ಥ್ಯದ ನೀರಿನ ಘಟಕದಲ್ಲಿ ಸಂಗ್ರಹಿಸಿ ಪೂರೈಕೆ ಮಾಡುವ ಯೋಜನೆ ಇದಾಗಿದೆ. ಇದರಿಂದಾಗಿ 6050 ಮನೆಗಳ ನಲ್ಲಿಗಳ ಮೂಲಕ ನೀರು ಪೂರೈಕೆಯಾಗಲಿದೆ ಎಂದು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ಸುಖಮುನಿ ನಾಯಕ ’ಪ್ರಜಾವಾಣಿ’ಗೆ ತಿಳಿಸಿದರು.

ಪಟ್ಟಣದಲ್ಲಿ ಸದ್ಯ 20,869 ಜನರಿದ್ದು ಮುಂದಿನ 30 ವರ್ಷಗಳಲ್ಲಿ 31,333ರಷ್ಟು ಆಗಲಿದೆ ಎನ್ನುವ ಅಂದಾಜು ಇದೆ.

ಪ್ರತಿಯೊಬ್ಬ ವ್ಯಕ್ತಿಗೆ 135 ಎಲ್‌ಪಿಸಿಡಿ ಪ್ರಮಾಣದಂತೆ ಪರಿಗಣಿಸಿ ಯೋಜನೆ ರೂಪಿಸಲಾಗಿದೆ.

204 ಕೋಟಿ ವೆಚ್ಚದಲ್ಲಿ ಜಲಾಶಯದಲ್ಲಿ ಕಾಮನ್ ಹೌಸಿಂಗ್ ಚೇಂಬರ್, ಸ್ಟಿಲಿಂಗ್ ಬಸೀನ್, ಕಾಫರ್ ಡ್ಯಾಮ್, ಆರ್ ಸಿಸಿ ಪುಟ್ಟಬ್ರಿಡ್ಜ್ , ನೀರಿನ ಪಂಪ್ ಅಳವಡಿಸಸಬೇಕಿದೆ. ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು 33 ಕೆ.ವಿ. ಸಾಮರ್ಥ್ಯದ ಎಕ್ಸ್‌ಪ್ರೆಸ್ ಫೀಡ್ ಅಳವಡಿಸಲಾಗುತ್ತಿದೆ. ಕೆಲವು ವಾರ್ಡ್‌ಗಳಲ್ಲಿ ಕೊಳವೆ ಮಾರ್ಗ ಅಳವಡಿಸುವೆ ಕಾರ್ಯ ಆರಂಭವಾಗಿದೆ.

# ತುಂಗಾಭದ್ರಾ ನದಿ ನೀರಿನಲ್ಲಿ ಅಲ್ಯುಮಿನಿಯಂ ಹೆಚ್ಚು: ಬಸವರಾಜ ಪಾಟೀಲ



**ಗಂಗಾವತಿ :** ‘ತುಂಗಾಭದ್ರಾ ನದಿ ಹರಿವಿನ ಉದ್ದಕ್ಕೂ ಎಲ್ಲಿಯೂ ಚರಂಡಿನೀರುಶುದ್ಧೀಕರಣವ್ಯವಸ್ಥೆ ಕಲ್ಪಿಸಿಲ್ಲ. ಎಲ್ಲಡೆಯಿಂದ ನದಿಗೆ ಕೊಳಚೆ ನೀರು ಹರಿಬಿಡುತ್ತಿದ್ದು ಇದೇ ಪರಿಸ್ಥಿತಿ ಮುಂದುವರಿದರೆ 2040ಕ್ಕೆ ನದಿ ನೀರು ಕುಡಿಯಲು ಯೋಗ್ಯವಲ್ಲದ ಸ್ಥಿತಿ ತಲುಪುತ್ತದೆ’ ಎಂದು ರಾಷ್ಟ್ರೀಯ ಸ್ವಾಭಿಮಾನ ಆಂದೋಲನದ ಅಧ್ಯಕ್ಷ ಬಸವರಾಜ ಪಾಟೀಲ ವೀರಾಪುರ ಅಭಿಪ್ರಾಯಪಟ್ಟರು.

ನಗರದ ಐಎಂಎ ಸಭಾಂಗಣದಲ್ಲಿ ಮಂಗಳವಾರ ನಿರ್ಮಲ ತುಂಗಾಭದ್ರ ಅಭಿಯಾನದಿಂದ ನಡೆದ ಶೃಂಗೇರಿಯಿಂದ ಕಿಷ್ಕಿಂಧೆ (ಗಂಗಾವತಿ) ತನಕ ನಡೆದ ಬೃಹತ್ ಜಲ ಮತ್ತು ಜನ ಜಾಗೃತಿ ಪಾದಯಾತ್ರೆಯ ಸಮೀಕ್ಷಾ ವರದಿ ಬಿಡುಗಡೆ ಮಾಡಿ ಮಾತನಾಡಿದರು.

ಮೊದಲ ಹಂತವಾಗಿ ಶೃಂಗೇರಿಯಿಂದ ಹರಿಹರವರೆಗೆ 230 ಕೀ. ಮಿ, 2ನೇ ಹಂತವಾಗಿ ಹರಿಹರದಿಂದ ಕಿಷ್ಕಿಂಧಾ (ಗಂಗಾವತಿ)ವರೆಗೆ ನಿರ್ಮಲ ತುಂಗಾಭದ್ರ ಅಭಿಯಾನ ಮಾಡಿದ್ದು ಸಾಕಷ್ಟು ಜನ, ಸಂಘಟನೆಗಳ, ಪರಿಸರ ಪ್ರೇಮಿ, ಬುದ್ಧಿಜೀವಿಗಳ ಬೆಂಬಲ ಸಿಕ್ಕಿದೆ. ಎಲ್ಲರೂ ಈ ಅಭಿಯಾನದಲ್ಲಿ ಪಾಲ್ಗೊಂಡು ಜನಜಾಗೃತಿ ಮೂಡಿಸಿರುವುದು ಖುಷಿಯ ಸಂಗತಿ. ಅಕ್ಟೋಬರ್ ಅಥವಾ ನವಂಬರ್‌ನಲ್ಲಿ 3ನೇ ಹಂತದ ಅಭಿಯಾನ ಹಮ್ಮಿಕೊಳ್ಳಲಾಗುತ್ತದೆ’ ಎಂದರು.

ಇದಕ್ಕೂ ಮುನ್ನ ನಿರ್ಮಲ ತುಂಗಾಭದ್ರ ಅಭಿಯಾನದ ಪದಾಧಿಕಾರಿಗಳು ಶೃಂಗೇರಿಯಿಂದ ಕಿಷ್ಕಿಂಧೆ (ಗಂಗಾವತಿ) ತನಕ ನಡೆದ ಬೃಹತ್ ಜಲ ಮತ್ತು ಜನ ಜಾಗೃತಿ ಪಾದಯಾತ್ರೆಯ ಸಮೀಕ್ಷಾ ವರದಿ ಬಿಡುಗಡೆ ಮಾಡಿದರು.

ರಾಷ್ಟ್ರೀಯ ಸ್ವಾಭಿಮಾನದ ದಕ್ಷಿಣ ಭಾರತದ ಸಂಚಾಲಕ ಸಿ.ಪಿ ಮಾಧವನ್, ನಿರ್ಮಲ ತುಂಗಾಭದ್ರ ಅಭಿಯಾನದ ಸಂಚಾಲಕ ಎಂ.ಶಂಕರ, ಕೊಪ್ಪಳ ಜಿಲ್ಲಾಸಂಚಾಲಕಡಾ.ಶಿವಕುಮಾರ ಮಾಲಿಪಾಟೀಲ, ಸಂತೋಷ ಕೆಲೋಜಿ, ಜಗನ್ನಾಥ ಆಲಂಪಲ್ಲಿ, ಡಾ.ಎ.ಸೋಮರಾಜು, ಹಾಸ್ಯ ಭಾಷಣಕಾರ ಬಿ.ಪ್ರಾಣೇಶ, ರುದ್ರೇಶ ಆರ್ಹಾಳ, ರಾಘವೇಂದ್ರ ತೂನಾ, ಬಾಲಕೃಷ್ಣನಾಯ್ಡು, ಮಂಜುನಾಥ ಗುಡ್ಲಾನೂರ, ಅರ್ಜುನ,ಮಂಜುನಾಥಕಟ್ಟಿಮನಿ, ಪವನಕುಮಾರ, ರಾಘವೇಂದ್ರ ಚೌಡ್ಕಿ ಉಪಸ್ಥಿತರಿದ್ದರು.

**‘ಎಲ್ಲರೂ ಆಸ್ಪತ್ರೆಗಳಿಗೆ ಸೇರಲಿದ್ದಾರೆ’**

ಪರ್ಯಾವರಣ ಟ್ರಸ್ಟ್ ಅಧ್ಯಕ್ಷ ಪ್ರೊ. ಕುಮಾರಸ್ವಾಮಿ ಮಾತನಾಡಿ ‘2 ಹಂತಗಳ ನಿರ್ಮಲ ತುಂಗಾಭದ್ರ ಅಭಿಯಾನ 7 ಜಿಲ್ಲೆ 13 ತಾಲ್ಲೂಕು 120 ಗ್ರಾಮಗಳ ಮೂಲಕ 430 ಕೀ.ಮಿ ಸಾಗಿದೆ. 50 ಸಾವಿರ ಜನ 150 ಶಾಲೆ–ಕಾಲೇಜು 250 ಪರಿಸರ ಕಾಳಜಿ ಸಂಸ್ಥೆ 30 ಧಾರ್ಮಿಕ ಮಠಗಳು ಬೆಂಬಲಿಸಿ ಅಭಿಯಾನದಲ್ಲಿ ಪಾಲ್ಗೊಂಡಿವೆ’ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಹರಿಯುವ ದೊಡ್ಡ ನದಿ ತುಂಗಾಭದ್ರಾ. ನದಿಗೆ ಬಿಡುವ ಕಲುಷಿತ ನೀರು ಎಲ್ಲಿಯೂ ಶುದ್ಧಿಕರಣ ವಾಗದ ಕಾರಣ ನದಿ ಸಂಪೂರ್ಣ ಕಲುಷಿತವಾಗಿದೆ. ಸಾಕಷ್ಟುಜನರುನದಿನೀರುಕುಡಿದು ರೋಗಗಳಿಗೆ ತುತ್ತಾಗಿದ್ದಾರೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಖಾಸಗಿ ಪ್ರಯೋಗಾಲಯ ನದಿ ನೀರು ಪರೀಕ್ಷೆ ಮಾಡಿದಾಗ ಪ್ರತಿ ಲೀಟರ್ ಕುಡಿಯುವ ನೀರಿನಲ್ಲಿ ಇರಬೇಕಾದ ಅಲ್ಯುಮಿನಿಯಂ ಪ್ರಮಾಣಕ್ಕಿಂತ 2ರಿಂದ 3 ಪಟ್ಟು ಹೆಚ್ಚಿದೆ. ನಿಖರವಾಗಿ ಪ್ರತಿ ಲೀಟರ್ ಕುಡಿಯುವ ನೀರಿನಲ್ಲಿ 0.2 ರಿಂದ 0.3 ಮಿಲಿ ಗ್ರಾಂ ಅಲ್ಯುಮಿನಿಯಂ ಇರಬೇಕು. ತುಂಗಾಭದ್ರಾನದಿಯಲ್ಲಿ 0.205 ಮಿಲಿ ಗ್ರಾಂ ಅಲ್ಯುಮಿನಿಯಂ ಇದೆ. ಮುಂದೆ ಎಲ್ಲರೂ ಆಸ್ಪತ್ರೆಗಳಿಗೆ ಸೇರಲಿದ್ದಾರೆ’ ಎಂದು ಎಚ್ಚರಿಸಿದರು.

# ಸಚಿವ ಸತೀಶ ಜಾರಕಿಹೊಳಿ ಸ್ವಪ್ನ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಗೆ ಭೇಟಿ



**ವಿಜಯಪುರ :** ನಗರದ ಆಶ್ರಮ ರಸ್ತೆಯಲ್ಲಿರುವ ಸ್ವಪ್ನ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಗೆ ಮಂಗಳವಾರ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಭೇಟಿ ನೀಡಿ ಮಕ್ಕಳ ಕಲಿಕಾ ಪರಿಸ್ಥಿತಿಗಳ ಬಗ್ಗೆ ವಿಚಾರಿಸಿದರು.

ತರಗತಿ ಕೊಠಡಿ, ಲ್ಯಾಬ್, ಗ್ರಂಥಾಲಯ ಸೇರಿದಂತೆ ವಿವಿಧ ಸೌಲಭ್ಯಗಳ ಬಗ್ಗೆ ಪರಿಶೀಲನೆ ನಡೆಸಿದ ಅವರು, ಅಧ್ಯಾಪಕರು ಹಾಗೂ ಸಿಬ್ಬಂದಿಗಳಿಂದ ಮಾಹಿತಿ ಪಡೆದರು.

ವಿದ್ಯಾರ್ಥಿಗಳ ಅಭಿಪ್ರಾಯ, ಅಗತ್ಯವಿರುವ ಸೌಲಭ್ಯ ಹಾಗೂ ಸಮಸ್ಯೆಗಳ ಬಗ್ಗೆ ಆಲಿಸಿದರು. ವಿದ್ಯಾರ್ಥಿಗಳು ತಮ್ಮ ಶಿಕ್ಷಣ, ಕನಸುಗಳ ಬಗ್ಗೆ ಹಂಚಿಕೊಂಡಾಗ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಹ ಪ್ರೇರಣಾದಾಯಕ ಮಾತು ಹೇಳಿ ಹುರಿದುಂಬಿಸಿದರು.

ಶಾಲೆಯ ಅಧ್ಯಕ್ಷ ಶಿವಾನಂದ ರೇಶ್ಮಿ ಹಾಗೂ ಮುಖ್ಯೋಪಾಧ್ಯಾಯಿನಿ ಡಾ. ಸುಜಾತಾ ಬಿರಾದಾರ ಅವರು, ಶಾಲೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ಮಕ್ಕಳಿಗೆ ಎದುರಾಗುತ್ತಿರುವ ತೊಂದರೆಗಳನ್ನು ಸಚಿವರ ಗಮನಕ್ಕೆ ತಂದರು. ವಿಶೇಷವಾಗಿ ಆಟದ ಮೈದಾನ, ಶೌಚಾಲಯ, ಶುದ್ಧ ಕುಡಿಯುವ ನೀರು ಅವಶ್ಯಕತೆ ಮುಂತಾದ ಅನೇಕ ಅಂಶಗಳ ಬಗ್ಗೆ ಉಲ್ಲೇಖ ಮಾಡಿದರು.

ಸಚಿವರು ಸಮಸ್ಯೆಗಳನ್ನು ತಾಳ್ಮೆಯಿಂದ ಆಲಿಸಿ, ವಿಕಲಚೇತನ ಮಕ್ಕಳ ಶಿಕ್ಷಣವು ಅತ್ಯಂತ ಮೌಲ್ಯಮಯ ಮತ್ತು ಆಪ್ತವಾಗಿರಬೇಕು. ಸರಕಾರದ ಮಟ್ಟದಲ್ಲಿ ಸಾಧ್ಯವಾದಷ್ಟು ಸಹಾಯ ಮಾಡುವ ಭರವಸೆ ನೀಡುತ್ತೇನೆ ಎಂದು ತಿಳಿಸಿದರು.

ಸಭೆಯ ಅಂತ್ಯದಲ್ಲಿ ಮಕ್ಕಳೊಂದಿಗೆ ಸಂತಸವಾಗಿ ಮಾತನಾಡಿದ ಸಚಿವರು, ಅವರ ಚಟುವಟಿಕೆಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲೆಯ ಕರ್ತ್ಯತತ್ಪರತೆಯನ್ನು ಪ್ರಶಂಸಿಸಿದ ಅವರು, ಈ ಸಂಸ್ಥೆಗೆ ಬೇಕಾದ ಅಗತ್ಯ ನೆರವಿನ ಬಗ್ಗೆ ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ರಾಜು ಆಲಗೂರ, ಹಿರಿಯ ಕಾಂಗ್ರೆಸ್ ಮುಖಂಡರಾದ ಹಮೀದ್ ಮುಶ್ರಿಫ್, ಜಮೀರ್ ಬಕ್ಷಿ ಹಾಗೂ ವಿಕಲಚೇತನರ ಕಲ್ಯಾಣಾಧಿಕಾರಿ ಜಗದೀಶ ಕೆಂಪಲಿಂಗಣ್ಣವರ ಅವರು ಉಪಸ್ಥಿತರಿದ್ದರು.

# ಕೋರ್ಟ್ ಆವರಣದಲ್ಲೇ ಪತ್ನಿ ಮೇಲೆ ಹಲ್ಲೆ



**ಸವದತ್ತಿ :** ಇಲ್ಲಿನ ಕೌಟುಂಬಿಕ ನ್ಯಾಯಾಲಯದ ಆವರಣದಲ್ಲಿ ಮಂಗಳವಾರ ಮುತ್ತಪ್ಪ ಗಣಾಚಾರ (25) ಎಂಬಾತ ತನ್ನ ಪತ್ನಿ ಐಶ್ವರ್ಯಾ (22) ಹಾಗೂ ಅತ್ತೆ ಅನುಸೂಯಾ (48) ಮೇಲೆ ಮಾರಕಾಸ್ತ್ರದಿಂದ ಹಲ್ಲೆ ಮಾಡಿದ್ದಾನೆ. ಗಂಭೀರವಾಗಿ ಗಾಯಗೊಂಡ ಇಬ್ಬರನ್ನೂ ಹುಬ್ಬಳ್ಳಿಯ ಕೆಎಂಸಿಗೆ ದಾಖಲಿಸಲಾಗಿದೆ.

ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಸವಟಗಿ ಗ್ರಾಮದ ಮುತ್ತಪ್ಪ ಮತ್ತು ಸವದತ್ತಿ ತಾಲ್ಲೂಕಿನ ಕಟ್ಟಿಕಟ್ಟಿ ಗ್ರಾಮದ ಐಶ್ವರ್ಯಾ ಅವರ ವಿವಾಹ ವರ್ಷದ ಹಿಂದೆ ಆಗಿತ್ತು. ಐಶ್ವರ್ಯಾ ವಿಚ್ಛೇದನ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಮಂಗಳವಾರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಬಿಡುವಿನ ವೇಳೆ ಮುತ್ತಪ್ಪ ಕಬ್ಬು ಕಟಾವು ಮಾಡುವ ಕೊಯ್ತಾದಿಂದ ಐಶ್ವರ್ಯಾ ಮೇಲೆ ದಾಳಿ ಮಾಡಿದ. ಅದನ್ನು ತಪ್ಪಿಸಲು ಬಂದ ಅನುಸೂಯಾಗೂ ಗಾಯವಾಯಿತು. ಇಬ್ಬರೂ ರಕ್ತದ ಮಡುವಿನಲ್ಲಿ ಬಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು’ ಎಂದು ಸವದತ್ತಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಹಲ್ಲೆಯಿಂದ ಮಹಿಳೆಯನ್ನು ಕಾಪಾಡಲು ಬಂದ ಅವರ ವಕೀಲರಿಗೂ ಗಾಯಗಳಾಗಿವೆ.

ಇದೇ ಆರೋಪಿ, 2024 ಡಿಸೆಂಬರ್ 25ರಂದು ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಅನೈತಿಕ ಸಂಬಂಧ ಶಂಕೆಯಿಂದ ವ್ಯಕ್ತಿಯೊಬ್ಬರ ಮೇಲೆ ಕುಡಗೋಲಿನಿಂದ 24 ಬಾರಿ ದಾಳಿ ಮಾಡಿದ್ದ. ಸದ್ಯ ಜಾಮೀನು ಪಡೆದು ಹೊರಗೆ ಬಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

# ವಿಜೃಂಬಣೆಯಿಂದ ಜರುಗಿದ ಅಂಬಾಭವಾನಿ ಜಾತ್ರೋತ್ಸವ



**ತಾಳಿಕೋಟೆ :** ಪಟ್ಟಣದ ಗೋಂದಳಿ ಸಮಾಜ ಬಾಂದವರ ಕುಲದೇವತೆಯಾದ ಶ್ರೀ ಅಂಬಾಭವಾನಿ ಜಾತ್ರೋತ್ಸವವು ಪ್ರತಿವರ್ಷದಂತೆ ಈ ಸಲವು ಮಂಗಳವಾರರಂದು ಭಕ್ತಿಭಾವದೊಂದಿಗೆ ವಿಜೃಂಬಣೆಯಿಂದ ಜರುಗಿತು.

ಜಾತ್ರೋತ್ಸವ ಅಂಗವಾಗಿ ಶ್ರೀ ಅಂಬಾಭವಾನಿ ಮಂದಿರದಲ್ಲಿಯ ಮಹಾ ಮೂರ್ತಿಗೆ ಮಹಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಹಾ ಮಂಗಳಾರತಿ ಜರುಗಿತಲ್ಲದೇ ನಂತರ ಶ್ರೀ ಅಂಬಾಭವಾನಿ ದೇವಿಯ ಭಾವಚಿತ್ರದ ಹಾಗೂ ಫಲ್ಲಕ್ಕಿ ಉತ್ಸವದ ಭವ್ಯ ಮೆರವಣಿಗೆಯು ವಿವಿಧ ವಾದ್ಯವೈಭವಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿ ಶ್ರೀ ಭಾವಸಾರ ಅಂಬಾಭವಾನಿ ಮಂದಿರದ ವರೆಗೆ ಜರುಗಿ ಮರಳಿ ಅದೇ ಮಾರ್ಗವಾಗಿ ಗೊಂದಳಿ ಸಮಾಜದ ಶ್ರೀ ಅಂಬಾಭವಾನಿ ಮಂದಿರಕ್ಕೆ ತಲುಪಿತು.

ಮೇರವಣಿಗೆಯುದ್ದಕ್ಕೂ ನಾಸಿಕ ಡೋಲ, ಹಾಗೂ ಡೋಳ್ಳಿನ ವಾದ್ಯವು ನೋಡುಗರ ಗಮನ ಸೇಳೆಯಿತು.

ಈ ಜಾತ್ರೋತ್ಸವದ ನೇತೃತ್ವವನ್ನು ಸಮಾಜದ ಅಧ್ಯಕ್ಷರಾದ ವಿಠ್ಠಲ ಸಊರ್ಯವಂಶಿ, ನಾಮದೇವ ಸಊರ್ಯವಂಶಿ, ತುಕಾರಾಮ ಸೂರ್ಯವಂಶಿ, ಶಿವಾಜಿ ಸೂರ್ಯವಂಶಿ, ಶಿವಾಜಿ ಸೂರ್ಯವಂಶಿ, ಸಾಬಣ್ಣ ಮಾರ್ಕರ್, ಸದಾಶಿವಬಾಯಿ, ಅಶೋಕ ನಾಯಕ, ರಾಜು ವಾಗ್ಮೋರೆ, ಅಶೋಕ ಮಕಟಕರ, ಹಣಮಂತ ವಾಸ್ತರ್, ಸೋಮಲಿಂಗ ಮೋರಕರ, ರಾಜು ವಾಗ್ಮೋರೆ, ಗೋವಿಂದ ಸೂರ್ಯವಂಶಿ, ಅಪ್ಪು ಸೂರ್ಯವಂಶಿ, ಹಣಮಂತ ಸೂರ್ಯವಂಶಿ, ಅಶೋಕ ಮುತ್ತಟಕರ, ಅವರನ್ನೊಳಗೊಂಡು ಯಾದಗಿರಿ, ಮುಧೋಳ, ಕೆಂಬಾವಿ, ಹೈದರಾಬಾದ, ತಾಳಿಕೋಟೆ ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಗೋಂದಳಿಸಮಾಜಬಾಂದವರು ಪಾಲ್ಗೊಂಡು ಮಹಾಪ್ರಸಾದ ಸ್ವಿಕರಿಸಿ ಪುನಿತರಾದರು.

# ಮಣ್ಣಿಗೆ ಹೋಗುವ ಮುನ್ನ 10 ಸಾವಿರ ಉದ್ಯೋಗ: ಮಾಜಿ ಶಾಸಕ ನಡಹಳ್ಳಿ ಭಾವುಕ ಮಾತು



**ಮುದ್ದೇಬಿಹಾಳ :** ‘ನಾನು ಮತಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರಿಂದಲೇ ಜನ ಬೆಂಬಲಿಸಲಿಲ್ಲವೋ ಏನೋ ಆದರೆ ರೈತರ ಮಕ್ಕಳು ಕಷ್ಟ ಅನುಭವಿಸಬಾರದು ಎಂಬ ಉದ್ದೇಶದಿಂದ ನಾನು ಮಣ್ಣಿಗೆ ಹೋಗುವ ಮುನ್ನ 10 ಸಾವಿರ ಉದ್ಯೋಗ ಕೊಟ್ಟು ಹೋಗುತ್ತೇನೆ’ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಭಾವುಕರಾಗಿ ಹೇಳಿದರು.

ಪಟ್ಟಣದ ಮಾರುತಿ ನಗರದಲ್ಲಿರುವ ತಮ್ಮ ಫಾರ್ಮಹೌಸ್‌ನಲ್ಲಿಮಂಗಳವಾರ ಅಭಿಮಾನಿಗಳು,ಕಾರ್ಯಕರ್ತರು ಹಮ್ಮಿಕೊಂಡಿದ್ದ ತಮ್ಮ 56ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾವೆಲ್ಲ ಜಾತಿ ವಿಷಯ ಬಂದಾಗ ಒಗ್ಗಟ್ಟು ಆಗುತ್ತೇವೆ. ಆದರೆ ಜನರ ಬದುಕು ಕಟ್ಟುವ ನಾಯಕತ್ವವನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ಎಡವಿದ್ದೇವೆ. ಆಧುನಿಕ ಬದುಕು ಕಟ್ಟಿಕೊಡುವ, ಸೌಲಭ್ಯಗಳನ್ನು ಜನರಿಗೆ ತಲುಪಿಸುವ ನಾಯಕತ್ವ ಬೇಕು. ತೊಗರಿ ಬೆಳೆ ನಷ್ಟವಾದರೂ ಈ ಸರ್ಕಾರದಿಂದ ಒಂದು ರುಪಾಯಿ ಪರಿಹಾರ ಬಂದಿಲ್ಲ, ಬರುವುದೂ ಇಲ್ಲ. ಈ ಸರ್ಕಾರ, ಈಗ ನೀವು ಆಯ್ಕೆ ಮಾಡಿಕೊಂಡ ಜನಪ್ರತಿನಿಧಿ ಹಾಗೆ ಇದ್ದಾರೆ. ರೈತರು ಬೆಳೆ ಇನ್ಸೂರೆನ್ಸ್ ಬಂದಿಲ್ಲ ಎಂದು ಕೇಳುತ್ತಿದ್ದಾರೆ’ ಎಂದು ತಿಳಿಸಿದರು.

ನೀರಾವರಿ ಯೋಜನೆಗಳು ಅಲ್ಲಿಗೆ ನಿಂತಿವೆ. ನಾಗರಬೆಟ್ಟ ಏತ ನೀರಾವರಿ ಯೋಜನೆ ಏನಾಗಿದೆ. ಬೂದಿಹಾಳ ಪೀರಾಪೂರ ಯೋಜನೆಗಾಗಿ ರೈತರು ಹೋರಾಟ ನಡೆಸುವಾಗ ನಾನು ಹೋರಾಟಕ್ಕೆ ಬೆಂಬಲಿಸುವುದಾಗಿ ಹೇಳುತ್ತಲೇ ಉಸ್ತುವಾರಿ ಸಚಿವರು ಓಡಿ ಬಂದು ಭರವಸೆ ಕೊಟ್ಟು ಹೋದರು. ನೀರಾವರಿಗಾಗಿ ಹೋರಾಟ ಅನಿವಾರ್ಯ ಎಂಬಂತಾಗಿದೆ’ ಎಂದರು.

ಮತಕ್ಷೇತ್ರದಲ್ಲಿ ಕುಡಿವ ನೀರಿನ ಯೋಜನೆ ಸಲುವಾಗಿ ಸಿಸಿ ರಸ್ತೆ ಹಾಳುಮಾಡುತ್ತಿದ್ದಾರೆ. ಆಯ್ಕೆಯಾದವರು ನಿಮ್ಮೂರಿಗೆ ಬಂದು ಧನ್ಯವಾದ ಕೂಡಾ ಹೇಳಲಿಲ್ಲ. ಮೊದಲು ಅವರಿಗೆ ಹಳ್ಳಿಗಳ ಜನಕ್ಕೆ ನೀರು ಕೊಡಲು ತಿಳಿಸಿ. ನನ್ನ ದುಡಿಮೆಯಲ್ಲಿ ಅರ್ಧ ರಾಜಕಾರಣಕ್ಕೆ, ದಾಸೋಹಕ್ಕೆ ವ್ಯಯ ಮಾಡಿದ್ದೇನೆ. ನನಗೆ ಮಂತ್ರಿಯಾಗಿ ಮೆರೆಯಬೇಕು ಎಂಬ ಭಾವನೆ ಇಲ್ಲ. ರೈತರ ಮಕ್ಕಳು ತಮ್ಮ ತಂದೆಯವರು ಅನುಭವಿಸಿದ ಕಷ್ಟ ಅನುಭವಿಸಬಾರದು ಎಂಬ ಕಾರಣದಿಂದ ರಾಜಕಾರಣಕ್ಕೆ ಬಂದಿದ್ದೇನೆ. ಇದು ಕೇವಲ ಭಾಷಣಕ್ಕಾಗಿ ಮಾತಲ್ಲ ಸಂಕಲ್ಪದಿಂದ ಮಾತನಾಡುತ್ತಿದ್ದೇನೆ’ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ರಮೇಶ ಬಿದನೂರ, ರವಿಕಾಂತ ಬಗಲಿ,ಪ್ರಭುಗೌಡ ಬಿರಾದಾರ, ಪ್ರಭು ಕಡಿ, ಬಿ.ಪಿ.ಕುಲಕರ್ಣಿ, ಮಲಕೇಂದ್ರಗೌಡ ಪಾಟೀಲ, ಗಂಗಾಧರ ನಾಡಗೌಡ,ರವೀಂದ್ರ ಲೋಣಿ,ಎಂ.ಬಿ.ಅಂಗಡಿ,ಎಂ.ಎಸ್.ಪಾಟೀಲ,ಸುಮಂಗಲಾ ಕೋಟಿ, ಕೆ.ವೈ.ಬಿರಾದಾರ,ಮಹದೇವಯ್ಯ ಶಾಸ್ತ್ರೀಗಳು, ಪುರಸಭೆ ಸದಸ್ಯೆ ಸಹನಾ ಬಡಿಗೇರ ಮಾತನಾಡಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ ಸೇರಿದಂತೆ ಪಕ್ಷದ ಮುಖಂಡರು ಇದ್ದರು.

ನಡಹಳ್ಳಿಯವರ ಜನ್ಮದಿನದ ಅಂಗವಾಗಿಅವರಅಭಿಮಾನಿಗಳು, ಕಾರ್ಯಕರ್ತರು ರಕ್ತದಾನ ಶಿಬಿರ, ಆರೋಗ್ಯತಪಾಸಣಾ ಶಿಬಿರ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ನಡೆಸಿದರು.

ಮುದ್ದೇಬಿಹಾಳ ಮತಕ್ಷೇತ್ರಕ್ಕೆ ಈಗ ಆಯ್ಕೆಯಾದವರು ಒಂದೇ ಒಂದು ಪಂಚಾಯಿತಿಗೆ 12 ತಾಸು ಕರೆಂಟ್ ಕೊಡಲು ಆಗುತ್ತದೆಯೇ ಎಂಬುದನ್ನು ತೋರಿಸಿಕೊಡಲಿ ಎಂದು ಸವಾಲು ಹಾಕಿದ ಮಾಜಿ ಶಾಸಕ ನಡಹಳ್ಳಿ, ನಾನು ಇಡೀ ತಾಲ್ಲೂಕಿಗೆ 12 ತಾಸು ವಿದ್ಯುತ್ ಕೊಡುತ್ತೇನೆ. ನನ್ನ ಅವಧಿಯಲ್ಲಿ ಹತ್ತು ವಿದ್ಯುತ್ ಸ್ಟೇಷನ್ ತಂದಿದ್ದೇವೆ. ಆಗ ಏಳು ತಾಸು ಕೊಡುತ್ತಿದ್ದರು. ಈಗಲೂ ಅಷ್ಟೇ ವಿದ್ಯುತ್ ಕೊಡುತ್ತಿದ್ದಾರೆ. ಇವರಿಂದ ಎರಡೂವರೆ ವರ್ಷದಲ್ಲಿ ಹೆಚ್ಚಿಗೆ ವಿದ್ಯುತ್ ಕೊಡುವುದಕ್ಕೆ ಆಗಿಲ್ಲ’ ಎಂದು ಶಾಸಕ ನಾಡಗೌಡರ ಹೆಸರು ಹೇಳದೇ ಟೀಕಿಸಿದರು.

# ನಾನು ಸಿಎಂ ಹುದ್ದೆಗೆ ಕ್ಲೇಮ್ ಮಾಡಿಯೇ ಇಲ್ಲ : ಸಚಿವ ಸತೀಶ ಜಾರಕಿಹೊಳಿ



**ವಿಜಯಪುರ** : ರಾಜ್ಯದ ಮುಖ್ಯಮಂತ್ರಿ ಬದಲಾವಣೆ ವಿಷಯ ಹೈಕಮಾಂಡ್ ಗೆ ಬಿಟ್ಟ ವಿಚಾರ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಮಂಗಳವಾರನಗರದಲ್ಲಿಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಈ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಬೇಕು ಎಂದರು.

ಸಿಎಂ ಈಗಾಗಲೇ ನಾನೇ 5 ವರ್ಷ ಇರ್ತಿನಿ ಎಂದಿದ್ದಾರೆ.

ಸಿಎಂ ಜಾಗ ಖಾಲಿ ಇಲ್ಲ ಎಂದು ಸ್ವತಃ ಡಿಸಿಎಂ ಹೇಳಿದ್ದಾರೆ.

ಅವರೇ ಹೊಂದಾಣಿಕೆ ಆಗಿದ್ದಾರೆ. ನಾವು ಹೇಳುವುದು ಏನು ಇಲ್ಲ ಎಂದು ತಿಳಿಸಿದರು.

ಸತೀಶ ಅಭಿಮಾನಿಗಳಿಂದ ಸಿಎಂ ಘೋಷಣೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಜಾರಕಿಹೊಳಿ ಅವರು, ಅದೆಲ್ಲ ಏನಿಲ್ಲ. ನಾನು ಯಾವತ್ತೂ ಅದನ್ನು ಕ್ಲೈಮ್ ಮಾಡಿಯೇ ಇಲ್ಲ. ಅದರ ಬಗ್ಗೆ ನಾನು ಯಾವತ್ತೂ ಹೇಳಿಯೇ ಇಲ್ಲ.

ನಾನು ವೈಯಕ್ತಿಕ ಕೆಲಸದ ಮೇಲೆ ದೆಹಲಿಗೆ ಹೋಗುತ್ತೇನೆ. ನಮ್ಮ ಡಿಪಾಟ್ಮೆರ್ಂಟ್ ಕೆಲಸದ ಮೇಲೆ ಹೋಗಲೇ ಬೇಕಾಗುತ್ತದೆ. ಅದಕ್ಕೆ ಹೋಗುತ್ತೇವೆ. ಅದಕ್ಕೂ ರಾಜಕೀಯಕ್ಕೂ ಸಂಬಂಧ ಇಲ್ಲ ಎಂದು ಸಚಿವ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಸಿಎಂ–ಡಿಸಿಎಂ ನಡುವೆ ಮುಸುಕಿನ ಗುದ್ದಾಟ ವಿಚಾರವಾಗಿ ಮಾತನಾಡಿ, ಅದು ಮುಗಿದ ಹೋದ ವಿಚಾರ. ಈ ಬಗ್ಗೆ ಸ್ವತಃ ಸಿಎಂ ಹೇಳಿದ್ದಾರಲ್ಲ. ಹಾಗಾಗಿ ಮುಸುಕಿನ ಗುದ್ದಾಟ ಪ್ರಶ್ನೆಯೇ ಬರುವುದಿಲ್ಲ ಎಂದರು.

ಕೆಪಿಸಿಸಿ ರಾಜ್ಯಾಧ್ಯಕ್ಷ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅವರು, ಅದು ನಮ್ಮ ಹಂತದಲ್ಲಿ ಇಲ್ಲ.

ಹೈಕಮಾಂಡ್ ನಿರ್ಧಾರ ಮಾಡುತ್ತದೆ.

ಟೈಂ ಬಂದಾಗ ಅಧ್ಯಕ್ಷ ಸ್ಥಾನ ಬದಲಾವಣೆ ಮಾಡುತ್ತಾರೆ. ಸೂಕ್ತ ಸಮಯದಲ್ಲಿ ವರಿಷ್ಠರು ನಿರ್ಧಾರ ಮಾಡುತ್ತಾರೆ.

ಇದನ್ನು ನಾವು ಹೇಳಲಿಕ್ಕೆ ಆಗಲ್ಲ.ಕಾದು ನೋಡೋಣ ಎಂದು ಸತೀಶ್ ಜಾರಕಿಹೊಳಿ ಹೇಳಿದರು.

SIT ತನಿಖೆಯಲ್ಲಿ ಸೌಜನ್ಯ ಪ್ರಕರಣ ಪ್ರತ್ಯೇಕವಾಗಿಟ್ಟ ವಿಚಾರ ಕುರಿತು ಮಾತನಾಡಿ, ಅದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಖಖಖಿ ಮಾಡಿದ್ದಾರೆ. ತನಿಖೆ ಮಾಡಲಿ.

ಎರಡೂ ಪ್ರಕರಣ ನ್ಯಾಯಾಲಯಕ್ಕೆ ಹೋಗುತ್ತವೆ. ಅಂತಿಮ ತೀರ್ಪು ಬರಲಿ ನೋಡೋಣ. ಸರ್ಕಾರ ಸೂಕ್ತನಿರ್ಧಾರಮಾಡುತ್ತದೆ.ಎಲ್ಲರಿಗೂನ್ಯಾಯಸಿಗಲಿ ಎನ್ನುವ ದೃಷ್ಟಿಯಿಂದಲೇ ತೀರ್ಮಾನ ಮಾಡುತ್ತಾರೆ. ಕಾದು ನೋಡೋಣ ಎಂದು ಹೇಳಿದರು.

# ದೇವಕ್ಕೆಮ್ಮ ಅವರು ಅನರ್ಘ್ಯ ರತ್ನ ಕೊಟ್ಟಿದ್ದಾರೆ: ಕರಣೇಶ್ವರಶ್ರೀ



**ತಾಳಿಕೋಟೆ** : ಗುಂಡಕನಾಳ ಬೃಹನ್ ಮಠದ ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಮಾತೋಶ್ರೀ ದೇವಕ್ಕೆಮ್ಮ ಅವರು ಯಾವತ್ತಿಗೂ ಸ್ವಾರ್ಥವನ್ನು ಬಯಸದೇ ಸಮಾಜಕ್ಕಾಗಿ ದುಡಿದಂತಹ ಮಹಾನ್ ಮೇದಾವಿಯಾಗಿದ್ದರು ಸಮಾಜದ ದಾರಿದೀಪವಾಗುವಂತಹ ಗುರಲಿಂಗಶ್ರೀಗಳಂತಹ ಅನರ್ಘ್ಯ ರತ್ನವನ್ನು ಸಮಾಜಕ್ಕೆ ಉಡುಗೊರೆಯಾಗಿ ನೀಡಿದ್ದಾರೆಂದು ಚಿಂಚೋಳಿ ತಾಲೂಕಿನ ನಿಡಗುಂದಾಶ್ರೀಕಂಚಾಳಕುಂಟೆಬಸವೇಶ್ವರ ಮಠದ ಶ್ರೀ ಕರಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಮಂಗಳವಾರರಂದು ತಾಲೂಕಿನ ಗುಂಡಕನಾಳ ಗ್ರಾಮದ ಬೃಹನ್ ಮಠದಲ್ಲಿ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಮಾತೋಶ್ರೀ ದೇವಕ್ಕೆಮ್ಮನವರ ಶಿವಗಣಾರಾಧನೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿದ್ಯ ವಹಿಸಿ ಮಾತನಾಡುತ್ತಿದ್ದ ಅವರು ಮಾತೋಶ್ರೀ ದೇವಕ್ಕೆಮ್ಮನವರು ತಮ್ಮ ಇಡೀ ಜೀವನದ ಉದ್ದಕ್ಕೂ ಶ್ರೀಮಠದ ಶಿಷ್ಯವೃಂದದವರ ಯೋಗ ಕ್ಷೇಮ ಕೇಳುವದರೊಂದಿಗೆ ಅವರ ಕಷ್ಟಕಾರ್ಪಣ್ಯಗಳಲ್ಲಿ ಭಾಗಿಯಾಗುತ್ತಾ ತಮ್ಮ ಕೈಲಾದ ಸಹಾಯ ಹಸ್ತವನ್ನು ಕಲ್ಪಿಸುತ್ತಾ ಬಂದಿದ್ದರು ಶ್ರೀಮಠದ ಶಿಷ್ಯರೆಲ್ಲರೂ ಚಿಕ್ಕವರಿಂದ ಹಿರಿಯರೂ ಸಹ ಶ್ರೀಮಠದ ಅಮ್ಮಾ ಎಂದೇ ಕರೆಯುತ್ತಾ ಸಾಗಿದ್ದರು ಭಕ್ತವೃಂದದವರೆಲ್ಲರಿಗೂ ತಾಯಿಯ ಸ್ವರೂಪಿಣಿಯಾಗಿ ಅವರಿಗೆ ದಾರಿ ದೀಪವಾಗುವದರೊಂದಿಗೆ ಹಿರಿತನವನ್ನು ಕಾಯ್ದುಕೊಂಡು ಬಂದಿದ್ದರು ತಮ್ಮ 5 ಜನ ಸುಪುತ್ರರಲ್ಲಿ ಗುರುಲಿಂಗೇಶ್ವರರನ್ನು ಶ್ರೀಮಠದ ಪೀಠಾಧಿಪತಿಯನ್ನಾಗಿ ಮಾಡುವದರೊಂದಿಗೆ ಸಮಾಜಕ್ಕೆ ಅನರ್ಘ್ಯವಾದ ರತ್ನವನ್ನು ಕೊಟ್ಟುಹೋಗಿದ್ದಾರೆಸದಾಭಕ್ತೋದ್ದಾರಕ್ಕಾಗಿ ಈಗೀನ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ದುಡಿಯುತ್ತಾ ಸಾಗಿದ್ದಾರೆ ಇಂತಹ ತಾಯ್ತನವನ್ನು ಸದಾ ಭಕ್ತವೃಂದದಲ್ಲಿ ಕಾಯ್ದುಕೊಂಡು ಬಂದ ಮಾತೋಶ್ರೀ ದೇವಕ್ಕೆಮ್ಮನವರು ನಮ್ಮಿಂದ ಕಣ್ಮರೆಯಾಗಿದ್ದರೂ ಕೂಡಾ ಶ್ರೀಗುರುಲಿಂಗ ಶಿವಾಚಾರ್ಯ ಸ್ವಾಮಿಜಿಗಳೊಂದಿಗೆ ನಿಮ್ಮೊಡನೆ ಬೆರೆಯಲಿದ್ದಾರೆಂದರು.

ಚಿಮ್ಮಲಗಿ ಹಿರೇಮಠದ ಶ್ರೀ ಷ.ಬ್ರ.ಸಿದ್ದರೇಣುಕ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಶ್ರೀ ಗುರುಲಿಂಗಶಿವಾಚಾರ್ಯಮಹಾಸ್ವಾಮಿಗಳ ಮಾತೋಶ್ರೀ ದೇವಕ್ಕೆಮ್ಮನವರು 96 ವರ್ಷಗಳು ಬಧುಕಿದರೂ ಕೂಡಾ ತಮ್ಮ ಇಡೀ ಜೀವನವನ್ನು ಶಿಷ್ಯವೃಂದದವರಿಗಾಗಿ ಮುಡಿಪಾಗಿಟ್ಟಿದ್ದರು ಲಿಂ.ವೇ.ಮಹಾಂತ ಸ್ವಾಮಿಗಳು ಹಿರೇಮಠ ಅವರ ಕೈ ಹಿಡಿದ ನಂತರ ಅವರು ನಡೆದುಕೊಂಡ ಬಂದ ದಾರಿಯಲ್ಲಿ ಸಾಗಿದ್ದ ಮಾತೋಶ್ರೀ ದೇವಕ್ಕೆಮ್ಮನವರು ಸಾಮಾಜಿಕ, ಧಾರ್ಮಿಕ ಅಲ್ಲದೇ ಶೈಕ್ಷಣಿಕ ಕ್ಷೇತ್ರದಲ್ಲೂ ಕೂಡಾ ತೊಡಗಿಸಿಕೊಂಡವರಾಗಿದ್ದರು ಹೀಗಾಗಿ ತಮ್ಮ 7ನೇ ಪುತ್ರ ಗುರುಲಿಂಗೇಶ್ವರರನ್ನು ಸಮಾಜಕ್ಕಾಗಿ ಮುಡಿಪಾಗಿಟ್ಟು ಸ್ವ ಗ್ರಾಮದ ಶ್ರೀ ಗುಂಡಕನಾಳ ಹಿರೇಮಠಕ್ಕೆ ಪೀಠಾಧಿಪತಿಯನ್ನಾಗಿ ಮಾಡಲು ಸಹಕರಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಮತ್ತು ಸಮಾಜದ ಒಳಿತಿಗಾಗಿ ಅಲ್ಲದೇ ಧಾರ್ಮಿಕ ಕ್ಷೇತ್ರದ ಬೆಳವಣಿಗೆಗೆ ಈಗೀನಶ್ರೀಗಳಿಗೆ ಪಾಠಭೋಧನೆ ಮಾಡುವದರೊಂದಿಗೆ ಸಮಾಜಕ್ಕಾಗಿ ಪುತ್ರಪ್ರೇಮದೊಂದಿಗೆ ಕೊಡುಗೆಯನ್ನು ನೀಡಿದವರಾಗಿದ್ದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಶ್ರೀಮಠದ ಭಕ್ತವೃಂದದವರು ಸಾಗಬೇಕೆಂದರು.

ಈ ಸಮಯದಲ್ಲಿ ಗುಂಡಕನಾಳ ಹಿರೇಮಠದಶ್ರೀಗುರುಲಿಂಗಶಿವಾಚಾರ್ಯ ಮಹಾಸ್ವಾಮಿಗಳು, ಬಿ.ಎಂ.ಹಿರೇಮಠ, ಬಿಎಲ್‌ಡಿ ಸಂಸ್ಥೆಯ ನಿವೃತ್ತ ಪ್ರಾಚಾರ್ಯ ಡಾ.ಎಸ್.ಜಿ.ಹಿರೇಮಠ, ಶಶಿಧರ ಹಿರೇಮಠ, ಎಂ.ಜಿ.ಪಾಟೀಲ, ಎಸ್.ಎನ್.ಬೇನಾಳಮಠ, ಎಂ.ಎಸ್.ಲಕ್ಕುಂಡಿ, ನಿಂಗನಗೌಡ ಹಾದಿಮನಿ, ಎಚ್.ಎಸ್.ಗೂಗಲ್ಲ, ರವಿ ಕಾರಗನೂರ, ರವಿಂದ್ರನಾಥ ಪಾಟೀಲ, ವಿಜಯಕುಮಾರ ಗಬಸಾವಳಗಿ, ಎಂ.ಎಂ.ವಂದಗನೂರ, ಚಂದ್ರಶೇಖರ ಪಾಟೀಲ, ಯಂಕಣ್ಣ ಬಿರಾದಾರ, ಸುಭಾಸಗೌಡ ಬಿರಾದಾರ, ಎಸ್.ಎ.ಸಾವರದ, ನಾನಾಗೌಡ ಮೇಟಿ, ಸಿದ್ದನಗೌಡ ಬಿರಾದಾರ, ಶಿವರಂಜನ ಪಾಟೀಲ, ಎಸ್.ಎಂ.ಸಾವರದ, ಮೊದಲಾದವರು ಉಪಸ್ಥಿತರಿದ್ದರು.

# ಪ್ರೊ. ಕೊಳಮಲಿಯವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ



**ವಿಜಯಪುರ** : ನಗರದ ಚೇತನಾ ಶಿಕ್ಷಣ ಸಂಸ್ಥೆಯ ಚೇತನಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಸಾಹಿತಿ, ಕನ್ನಡದ ಪ್ರಾಧ್ಯಾಪಕ ಪ್ರೊ, ಎ. ಎಚ್. ಕೊಳಮಲಿಯವರಿಗೆ ಭಾರತೀಯ ಶಿಕ್ಷಣ ಮಂಡಲ ಉತ್ತರ ಪ್ರಾಂತ ವಿಜಯಪುರ ಜಿಲ್ಲೆ ಇವರು ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಇತ್ತೀಚೆಗೆ ನಡೆದ ಗುರು ನಮನ ಕಾರ್ಯಕ್ರಮದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದ್ದಾರೆ.

ಕೊಳಮಲಿಯವರ ಶಿಕ್ಷಣ ಕ್ಷೇತ್ರದ ಸಾಧನೆ ಮತ್ತು ಸಾಹಿತ್ಯ ಕ್ಷೇತ್ರದ ಅಮೋಘ ಸಾಧನೆಯ ಪರಿಗಣಿಸಿ ಪ್ರಶಸ್ತಿಯನ್ನು ನೀಡಲಾಗಿದೆ.

ಬಹುಮುಖ ಪ್ರತಿಭಾ ಸಂಪನ್ನರಾದ ಪ್ರೊ. ಎ.ಎಚ್. ಕೊಳಮಲಿಯವರು ನಾಡಿನ ಉದಯೋನ್ಮುಖ ಕವಿಗಳು ಮತ್ತು ಜಾನಪದ ವಿದ್ವಾಂಸರಾಗಿದ್ದಾರೆ.

ಈ ಮುಂಚೆ ಶ್ರೀಯುತರಿಗೆ ರಾಷ್ಟ್ರಮಟ್ಟದ ಪ್ರತಿಭಾವಂತ ಶಿಕ್ಷಕ ಪ್ರಶಸ್ತಿ,

ಕರುನಾಡು ಸಾಹಿತ್ಯ ರತ್ನ ಪ್ರಶಸ್ತಿ, ಕರುನಾಡು ಮಾಣಿಕ್ಯ ಪ್ರಶಸ್ತಿ, ಪ್ರತಿಷ್ಠಿತ ಬಸವಭೂಷಣ ಪ್ರಶಸ್ತಿ ಹತ್ತು ಹಲವು ಪ್ರಶಸ್ತಿಗಳು ಲಭಿಸಿವೆ.

# ಅಸ್ಕಿ ಫೌಂಡೇಶನ್ ದಿಂದ ಪಂಚಮಸಾಲಿ ಜಗದ್ಗುರುಗಳಿಗೆ ಸನ್ಮಾನ



**ತಾಳಿಕೋಟೆ** : ಲಿಂಗಾಯತ ಪಂಚಮಸಾಲಿ ಸಮಾಜದ ಕೂಡಲಸಂಗಮ ಪೀಠದ ಪ್ರಥಮ ಜಗದ್ಗುರುಗಳಾದ ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳನ್ನು ಬೆಟ್ಟಿಯಾದ ಅಸ್ಕಿ ಫೌಂಡೇಶನ್ ಅಧ್ಯಕ್ಷ ಕಾಂಗ್ರೇಸ್ ಮುಖಂಡ ಸಿ.ಬಿ.ಅಸ್ಕಿ ಅವರು ಜಗದ್ಗುರುಗಳ ಆರೋಗ್ಯ ಕ್ಷೇಮವನ್ನು ವಿಚಾರಿಸಿದರಲ್ಲದೇ ಅವರನ್ನು ಸನ್ಮಾನಿಸಿ ಗೌರವಿಸಿ ಆಶೀರ್ವಾದ ಪಡೆದುಕೊಂಡರು.

ಈ ಸಮಯದಲ್ಲಿ ಮಾತನಾಡಿದ ಅಧ್ಯಕ್ಷ ಸಿ.ಬಿ.ಅಸ್ಕಿ ಅವರು ಇತ್ತೀಚಗೆ ಜಗದ್ಗುರುಗಳಾದ ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳವರಿಗೆ ಆರೋಗ್ಯದಲ್ಲಿ ಏರುಪೇರಾಗಿ ಆಸ್ಪತ್ರೆಗೆ ದಾಖಲಾಗಿದ್ದರು ಅವರನ್ನು ಬೆಟ್ಟಿಯಾಗಲು ಆಗಿದ್ದಿಲ್ಲಾ ಅವರು ಸದ್ಯ ಆಸ್ಪತ್ರೆಯಿಂದ ಡಿಸ್ಚಾರ್ಜಆಗಿದ್ದಾರೆ ಅವರುಪಂಚಮಸಾಲಿಸಮಾಜದ ಜಗದ್ಗುರುಗಳಾಗಿದ್ದರೂ ಕೂಡಾ ಎಲ್ಲ ಸಮೂದಾಯದ ಜನರನ್ನು ಪ್ರೀತಿಯಿಂದ ಕಾಣುವದರೊಂದಿಗೆ ಒಳ್ಳೆಯ ರೀತಿಯಿಂದ ಎಲ್ಲ ಸಮಾಜದ ಜನರನ್ನೂ ಸಹ ಭಕ್ತರಂತೆ ಕಾಣುತ್ತಾ ಅವರ ಏಳಿಗೆಗೆ ಸಾಕಷ್ಟು ಸಲಹೆಯನ್ನು ನೀಡುತ್ತಾ ಬಂದಿದ್ದಾರೆ ಅವರಿಗೆ ದೇವರು ನೂರಾರು ಕಾಲ ಆಯುಷ್ಯ ಆರೋಗ್ಯ ಕರುಣಿಸಲಿ ಇನ್ನಷ್ಟು ಸಮಾಜದ ಶ್ರೇಯೋಭಿವೃದ್ದಿಗಾಗಿ ಕಾರ್ಯಗಳನ್ನು ಮಾಡುವ ಶಕ್ತಿ ಅವರಲ್ಲಿ ಬರಲಿ ಎಂದು ಆಶಿಸಿದರು.

ಇದೇ ಸಮಯದಲ್ಲಿ ಜಗದ್ಗುರುಗಳು ಅಸ್ಕಿಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ ಅವರನ್ನೂ ಸಹ ಸನ್ಮಾನಿಸಿ ಗೌರವಿಸಿದರು.

ಈ ಸಮಯದಲ್ಲಿ ಮುದ್ದೇಬಿಹಾಳ ಪುರಸಭಾ ಅಧ್ಯಕ್ಷ ಮೈಹಿಬೂಬ ಗೊಳಸಂಗಿ,

ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಮುದ್ದೇಬಿಹಾಳ ತಾಲೂಕಾ ಪಂಚಮಸಾಲಿ ಸಮಾಜದ ಅಧ್ಯಕ್ಷ ಅಮರೇಶ ಗೂಳಿ,

ಕೆಯುಸಿ ಬ್ಯಾಂಕ್ ನಿರ್ದೇಶಕ ರವಿ ಗೂಳಿ, ಸಮಾಜದ ಮುಖಂಡರಾದ ಬಸಲಿಂಗಪ್ಪ ರಕ್ಕಸಗಿ, ಟಿ.ವಿಜಯಭಾಸ್ಕರ, ಹುಸೇನ ಮುಲ್ಲಾ, ಮಲ್ಲು ಢವಳಗಿ, ಮೊದಲಾದವರು ಉಪಸ್ಥಿತರಿದ್ದರು.

# ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ಅರಿವು ಕಾರ್ಯಕ್ರಮ



**ಕೊಪ್ಪಳ** : ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ನೀಡಲಾಗುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯು 91 ಅಸಂಘಟಿತ ವಲಯದ ಕಾರ್ಮಿಕರಿಗೆ ಅನುಕೂಲವಾಗಲಿದೆ ಎಂದು ಕಾರ್ಮಿಕ ಸಚಿವರಾದ ಸಂತೋಷ ಎಸ್. ಲಾಡ್ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ನಗರದ ಹೊಸಪೇಟೆರಸ್ತೆಯಮಧುಶ್ರೀಗಾರ್ಡನ್‌ನಲ್ಲಿ ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಸಾರಿಗೆ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಕೊಪ್ಪಳ ಜಿಲ್ಲೆಯ ವಿವಿಧವರ್ಗಗಳಅಸಂಘಟಿತಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಿವಿಧ ಯೋಜನೆಗಳಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತ ದೇಶದಲ್ಲಿ ಶೇ 98ರಷ್ಟು ಜನರು ಅಸಂಘಟಿತ ಕಾರ್ಮಿಕರಿದ್ದು,

ನಮ್ಮ ರಾಜ್ಯದಲ್ಲಿ ಶೇ. 83 ರಿಂದ 85ರಷ್ಟು ಜನರು ಈ ಅಸಂಘಟಿತ ಕಾರ್ಮಿಕರ ವಲಯದಲ್ಲಿದ್ದಾರೆ.

ಸುವಾರು 1 ಕೋಟಿ 60 ಲಕ್ಷ ಅಸಂಘಟಿತ ಕಾರ್ಮಿಕರು ನಮ್ಮಲ್ಲಿ ನೋಂದಾಯಿಸಿಕೊಂಡಿದ್ದಾರೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಮಂಡಳಿಯಡಿ ಬರುವ ಕಾರ್ಮಿಕರಿಗೆ ನೀಡುವ ಸೌಲಭ್ಯಗಳನ್ನು ಅಸಂಘಟಿತ ವಲಯದ ಕಾರ್ಮಿಕರಿಗೂ ನೀಡುವಂತೆ ಬಹಳಷ್ಟು ಜನರು ಕೇಳಿಕೊಂಡಿದ್ದರು.

ಆದರೆ, ಮಂಡಳಿಯಲ್ಲಿ ನೋಂದಾಯಿತರಾದವರಿಗೆ ಮಾತ್ರ ಸೌಲಭ್ಯಗಳನ್ನು ನೀಡಲು ಅವಕಾಶವಿದೆ.

ಅಸಂಘಟಿತ ವಲಯದ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ 91 ವಲಯಗಳ ಕಾರ್ಮಿಕರಿಗೆಕರ್ನಾಟಕರಾಜ್ಯಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ಜಾರಿಗೆ ತರಲಾಗಿದೆ. ಅಸಂಘಟಿತ ಕಾರ್ಮಿಕರಿಗೆ ಇರುವ ಯೋಜನೆಗಳು ಮತ್ತು ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಬೇಕೆಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಕಾರ್ಮಿಕ ಇಲಾಖೆಯ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯೋಜನೆ ಮಾಡಲಾಗುತ್ತಿದೆ ಎಂದರು.

ಆನ್‌ಲೈನ್ ಆಯಪ್ ಮೂಲಕ ಅಮೇಜಾನ್, ಫ್ಲಿಪ್‌ಕಾರ್ಡ್, ಸ್ವಿಗ್ಗಿ, ಜೂಮ್ಯಾಟೋಗಂತಹ ಕಂಪನಿಗಳಲ್ಲಿ ನೋಂದಾಯಿಸಿಕೊಂಡು ಟ್ರಾನ್ಸ್‌ಪೋರ್ಟ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ವಿಶೇಷವಾದ ಮಸೂದೆಯನ್ನು ತಂದಿದ್ದು, ಕರ್ನಾಟಕ ರಾಜ್ಯದಲ್ಲಿ ಇಂತಹ ಸಮರಕವಾದ ಬಿಲ್ ಜಾರಿಗೆತಂದಿರುವುದು ದೇಶದಲ್ಲಿ ಎಲ್ಲಿಯೂ ಇಲ್ಲ.ಇದರಜೊತೆಗೆಸಿನಿಬಿಲ್‌ನ್ನುತಂದಿದ್ದು, ಸಿನಿಮಾ ಕ್ಷೇತ್ರದಲ್ಲಿ ದುಡಿಯುವ ಮೇಕಪ್ ಆರ್ಟಿಸ್ಟ್,ಡ್ಯಾನ್ಸರ್,ಪೋಷಕಕಲಾವಿದರು, ಪೌರಾಣಿಕ ನಾಟಕಗಳು ಮತ್ತು ಗ್ರಾಮ ಮಟ್ಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿರುವ ಹಲವಾರು ಕಲಾವಿದರಿಗೆ ಇದರಿಂದ ಅನುಕೂಲವಾಗಲಿದೆ.

ಖಾಸಗಿ ಬಸ್, ಲಾರಿ, ಆಟೋ, ಟಂಟಂ ಹೀಗೆ ಯಾವುದೇ ಸರಕು ಮತ್ತು ಸೇವಾ ಕಂಪನಿಗಳಲ್ಲಿ ವಾಹನ ಚಾಲಕರು, ಕ್ಲೀನರ್‌ಗಳು ಮತ್ತು ಇತರೆ ಕಾರ್ಮಿಕರ ಜೀವಹಾನಿಗೆ 5 ಲಕ್ಷದವರೆಗೆ ಪರಿಹಾರ ನೀಡಲಾಗುವುದು.

ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಜಿಲ್ಲೆಯ ರಸ್ತೆ ಅಪಘಾತಗಳ ವಲಯಗಳನ್ನು ಗುರುತಿಸಿ ಅಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಯಾವುದೇ ಸಣ್ಣ–ಸಣ್ಣ ಕಂಪನಿಗಳು ಎಸ್.ಸಿ ಮತ್ತು ಎಸ್.ಟಿ ಅಭ್ಯರ್ಥಿಗಳಿಗೆ ಕೆಲಸ ನೀಡಿದರೆ, ಎರಡು ವರ್ಷದವರೆಗೆ ಅಭ್ಯರ್ಥಿಗಳ ಇ.ಎಸ್.ಐ ಮತ್ತು ಪಿ.ಎಫ್ ಮೊತ್ತವನ್ನು ಕಾರ್ಮಿಕ ಇಲಾಖೆಯಿಂದ ಆಶಾದೀಪ ಯೋಜನೆಯಡಿ ಸಂಬಂಧಿಸಿದ ಕಂಪನಿಗಳಿಗೆ ಮರುಪಾವತಿಸಲಾಗುತ್ತಿದ್ದು, ಇದರಿಂದ ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ ಮತ್ತು ಕಂಪನಿಗಳಿಗೂ ಅನುಕೂಲವಾಗುತ್ತದೆ.

ಈ ಯೋಜನೆಯ ಬಗ್ಗೆ ಸಂಬಂಧಿಸಿದ ಕಾರ್ಖಾನೆಗಳಿಗೆ ಅಧಿಕಾರಿಗಳು ಮಾಹಿತಿ ನೀಡಬೇಕು.

ಹೊರಗುತ್ತಿಗೆ ಆಧಾರದಲ್ಲಿ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ರಾಜ್ಯಾದ್ಯಂತ ಏಜೆನ್ಸಿ ಬದಲಿಗೆ ಸೋಸೈಟಿ ಮೂಲಕವೇ ವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಜಂಟಿ ಕಾರ್ಮಿಕ ಆಯುಕ್ತರಾದ ಡಾ. ಎಸ್.ಬಿ. ರವಿಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿ, ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡಗಳನ್ನು ವಿತರಿಸುವುದರ ಜೊತೆಗೆ ಅವರಿಗೆ ಅರಿವು ಮೂಡಿಸುವ ಕಾರ್ಯಕ್ರಮ ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ. 1 ಕೋಟಿಗೂ ಅಧಿಕ ಅಸಂಘಟಿತ ಕಾರ್ಮಿಕರು ನಮ್ಮ ರಾಜ್ಯದಲ್ಲಿ ಇದ್ದಾರೆ. ಹಮಾಲರು.

ಮಡಿವಾಳರು. ಟೈಲರಗಳು.

ಚಿಂದಿ ಅಯುವವರು.

ಅಲೆಮಾರಿ ಹಾಗೂ ಅರೆ ಅಲೆಮಾರಿಗಳು.

ಕ್ಷೌರಿಕರು.

ಬೀದಿ ಬದಿ ವ್ಯಾಪಾರಿಗಳು. ಮೆಕ್ಯಾನಿಕಗಳು. ಕಟ್ಟಡ ಕಾರ್ಮಿಕರು. ಅಕ್ಕಸಾಲಿರು.

ಡೆಲಿವರಿ ಬಾಯ ಸೇರಿದಂತೆ 91 ವರ್ಗದ ಅಸಂಘಟಿತ ಕಾರ್ಮಿಕರು ಇದರಲ್ಲಿ ಬರುತ್ತಾರೆ.

ಅಸಂಘಟಿತ ಕಾರ್ಮಿಕರು ಅಪಘಾತದಲ್ಲಿ ಮರಣ ಹೊಂದಿದಾಗ ಅವರಿಗೆ 5 ಲಕ್ಷ ರೂ ಪರಿಹಾರ ನೀಡಲಾಗುತ್ತದೆ.

ಮಹಿಳೆಯರಿಗೆ ಹೆರಿಗೆ ಭತ್ಯ. ಕಾರ್ಮಿಕರ ಮಕ್ಕಳಿಗೆ ಸ್ಕಾಲರ್ಶಿಪ್ ಸೇರಿದಂತೆ ಇತರೆ ಹಲವಾರು ಯೋಜನೆಗಳಿದ್ದು, ತೆರೆಯ ಮರೆಯಲ್ಲಿ ದುಡಿಯುತ್ತಿರುವ ಲಕ್ಷ್ಯಾಂತರ ಅಸಂಘಟಿತ ಕಾರ್ಮಿಕರನ್ನು ಗುರುತಿಸುವ ಕೆಲಸವನ್ನು ಕಾರ್ಮಿಕ ಇಲಾಖೆಯಿಂದ ಮಾಡುತ್ತಿದ್ದೇವೆ ಎಂದು ಹೇಳಿದರು.

ಸಂವಿಧಾನ ಪೀಠಿಕೆ ವಾಚನ ಮಾಡುವ ಮೂಲಕ ಕಾರ್ಯಕ್ರಮ ಪ್ರಾರಂಭಿಸಲಾಯಿತು. 91ಕ್ಕು ಹೆಚ್ಚಿನ ಅಸಂಘಟಿತ ಕಾರ್ಮಿಕರಿಗೆ ಸಚಿವರು ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಿದ ನಂತರ ಆಶಾದೀಪ ಯೋಜನೆ ಅಡಿ ಎಸ್.ಸಿ.ಎಸ್.ಟಿ ಉದ್ಯೋಗಿಗಳ ಇ.ಎಸ್.ಐ ?ಫ ಇ.ಪಿಫ್ ಮೊತ್ತ ಮರುಪಾವತಿ ಚೆಕ್‌ಗಳ ವಿತರಣೆ ಹಾಗೂ ಖಾಸಗಿ ವಾಣಿಜ್ಯ ಚಾಲಕರ ಮಕ್ಕಳಿಗೆ 10 ಸಾವಿರ ರೂ. ಚೆಕ್‌ಗಳನ್ನು ವಿತರಣೆ ಮಾಡಿದರು.

ವಿವಿಧ ಸ್ಟಾಲ್‌ಗಳ ಮೂಲಕ ಕಾರ್ಮಿಕ ಇಲಾಖೆಯ ಯೋಜನೆಗಳ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತ, ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ,ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷರಾದ ಮುಂಡರಗಿ ನಾಗರಾಜ, ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಕಾರ್ಮಿಕ ಇಲಾಖೆ ಕಲಬುರಗಿ ಪ್ರಾದೇಶಿಕ ಆಯುಕ್ತರಾದ ಡಾ. ವೆಂಕಟೇಶ ಶಿಂಧಿಹಟ್ಟಿ, ಕಲಬುರಗಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ಮಹ್ಮದ್ ಬಶೀರ್ ಅನ್ಸಾರಿ, ಕೊಪ್ಪಳ ಉಪವಿಭಾಗಾಧಿಕಾರಿ ಮಹೇಶ ಮಾಲಗಿತ್ತಿ,

ಕೊಪ್ಪಳ ನಗರಸಭೆ ಸದಸ್ಯರಾದ ಗುರುರಾಜ ಹಲಗೇರಿ ಮತ್ತು ಮುತ್ತುರಾಜ ಕುಷ್ಟಗಿ, ಕೊಪ್ಪಳ ಉಪ ವಿಭಾಗದ ಕಾರ್ಮಿಕ ಅಧಿಕಾರಿಗಳಾದ ಸುಧಾ ಗರಗ, ಕಾರ್ಮಿಕ ನೀರೀಕ್ಷಕರಾದ ಕೊಪ್ಪಳ ವೃತ್ತದ ಮಂಜುಳಾ ವಿಶ್ವನಾಥ,

ಗಂಗಾವತಿ ವೃತ್ತದ ಎಂ.ಅಶೋಕ ಹಾಗೂ ಕುಷ್ಟಗಿ ವೃತ್ತದ ನಿವೇದಿತಾ,

ಜಿಲ್ಲಾ ಬಾಲಕಾರ್ಮಿಕ ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡ್ರ

ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು, ಜಿಲ್ಲೆಯ ವಿವಿಧ ಕಡೆಯಿಂದ ಆಗಮಿಸಿದ ಅಸಂಘಟಿತ ಕಾರ್ಮಿಕರು ಹಾಗೂ ಕಾರ್ಮಿಕ ಇಲಾಖೆಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

## ಮೆಕ್ಕೆಜೋಳ ಹೊಲಕ್ಕೆ ದೃಷ್ಟಿಬೊಂಬೆ ಬದಲು ದಪ್ಪ ಕಣ್ಣಿನ ನಾರಿಯ ಫೋಟೋ ಹಾಕಿದ ರೈತ ಗ್ರಾಮೀಣ ರೈತರ ಹೊಲಗಳಿಗೆ ಎಂಟ್ರಿ ಕೊಟ್ಟಳು ದೊಡ್ಡ ಕಣ್ಣಿನ ನಾರಿ



**ಕೂಡ್ಲಿಗಿ** : ಯಾವುದೇ ಅನಾರೋಗ್ಯ, ಪೀಡೆಗೂ ದೃಷ್ಟಿ ದೋಷವನ್ನು ತಾಳೆ ಹಾಕುವುದು ಸಾಮಾನ್ಯ. ದೃಷ್ಟಿ ದೋಷ ಹೆಚ್ಚಾಗಿ ನಮ್ಮ ಗ್ರಾಮೀಣ ಭಾಗಗಳಲ್ಲಿ ಕಂಡು ಬರುತ್ತದೆ. ಅದರಂತೆ ಕಟ್ಟಡ, ರಸ್ತೆ ತೋಟಕ್ಕೆ ಯಾರ ದೃಷ್ಟಿಯಾಗಬಾರದು ಎಂದು ದೃಷ್ಟಿಗೊಂಬೆ ಹಾಕಲಾಗುತ್ತೆ. ಆದ್ರೆ, ತಾಲೂಕಿನ ಚಿಕ್ಕ ಜೋಗಿಹಳ್ಳಿ ಗ್ರಾಮದ ರೈತನೋರ್ವ ಮಳೆ ಆಶ್ರಿತ ಮೆಕ್ಕೆಜೋಳ ಮೇಲೆ ಯಾರ ವಕ್ರ ದೃಷ್ಟಿಯೂ ಬೀಳಬಾರದು ಎಂದು ಇತ್ತೀಚಿನ ಕೆಲ ದಿನಗಳಲ್ಲಿ ಬೆಂಗಳೂರು, ನಗರ ಪ್ರದೇಶಗಳಲ್ಲಿ ಈ ಫೋಟೋ ಬಾರಿ ವೈರಲ್ ಹಾಗಿದ್ದ ದಪ್ಪ ಕಣ್ಣಿನ ಮಹಿಳೆಯ ಫೋಟೋ ಹಾಕಿದ್ದಾರೆ. ಹೌದು..

ಅಚ್ಚರಿ ಅನ್ನಿಸಿದರೂ ಸತ್ಯ. ಚಿಕ್ಕ ಜೋಗಿ ಹಳ್ಳಿಯ ರೈತನೊಬ್ಬ ತಮ್ಮ ಜಮೀನಿನಲ್ಲಿ ಮಳೆ ಆಶ್ರಿತವಾಗಿ ಬೆಳೆದ ಮೆಕ್ಕೆಜೋಳ ಉತ್ತಮವಾಗಿ ಫಸಲು ಬೆಳೆದಿದ್ದು, ಇನ್ನೇನು ತೆನೆ ಬಿಡುವ ಸಮಯವಿದೆ.

ಹೀಗಾಗಿ ಮೆಕ್ಕೆಜೋಳದ ಬೆಳೆ ಮೇಲೆ ಯಾರ ಕೆಟ್ಟ ಕಣ್ಣು ಬೀಳದಿರಲಿ,ಒಳ್ಳೆಯ ಫಸಲು ಬಂದು ಒಳ್ಳೆಲಾಭ ಸಿಗಲಿ ಎನ್ನುವ ಕಾರಣಕ್ಕೆ ದೃಷ್ಟಿ ಬೊಂಬೆ ಬದಲು ದಪ್ಪನೆಯ ಕಣ್ಣಿನ ಮಹಿಳೆಯ ಭಾವಚಿತ್ರ ನೇತಾಕಿದ್ದಾನೆ. ಇದು ನೋಡಗರ ಅಚ್ಚರಿಗೆ ಕಾರಣವಾಗಿದ್ದು, ಕೆಲವರು ಮುಸಿ ಮುಸಿ ನಕ್ಕಿದ್ದಾರೆ.

## ಶ್ರಾವಣ ಶುಭಾರಂಭ ಶ್ರೀ ಗುರು ಕೊಟ್ಟೂರೇಶ್ವರ ದೇವರ ದರ್ಶನ ಪಡೆದ ಭಕ್ತರು



**ಕೊಟ್ಟೂರು** : ಆಷಾಡ ಮುಗಿದು ಶ್ರಾವಣ ಶುಭಾರಂಭವಾದ ನಾಗರ ಪಂಚಮಿಯ ಗುರುವಾರ ಅಮಾವಾಸ್ಯೆಯಂದು ಜನರು ಕ್ಷೇತ್ರನಾಥ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ದರ್ಶನ ಪಡೆದರು. ಬೆಳಗಿನ ಜಾವದಿಂದಲೇ ಸಾವಿರಾರು ಜನರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನಕ್ಕಾಗಿ ಕಾದಿರುವುದು ಕಂಡುಬಂದಿತು. ದೂರದೂರುಗಳಿಂದ ನಿನ್ನೆ ರಾತ್ರಿಯೇ ಬಂದು ದೇವಸ್ಥಾನದಲ್ಲಿಯೇ ಉಳಿದುಕೊಂಡು ದೇವರ ದರ್ಶನ ಪಡೆದು ತಮ್ಮ ತಮ್ಮ ಊರುಗಳಿಗೆ ತೆರಳಿದರು. ಬಂದ ಭಕ್ತಾದಿಗಳು ದೇವಸ್ಥಾನದವತಿಯಿಂದ ನಡೆಸುವ ದಾಸೋಹವನ್ನು ಮಾಡಿದರು. ದೇವಸ್ಥಾನದ ಒಂದು ಭಾಗದಲ್ಲಿ ತಗಡಿನ ಹೊದಿಕೆಯಿದ್ದು, ಇನ್ನೊಂದು ಕಡೆಗೆ ಅರ್ಧಕ್ಕೆ ನಿಂತಿರುವುದು ಭಕ್ತಾದಿಗಳಿಗೆ ಸಮಸ್ಯೆಯಾಗಿರುವುದು ಕಂಡುಬಂದಿತು. ಆದಷ್ಟು ಬೇಗನೆ ಇನ್ನೊಂದು ಭಾಗದಲ್ಲಿಯೂ ತಗಡಿನ ಹೊದಿಕೆ ಕಾಮಗಾರಿ ಪೂರೈಸಿ ಭಕ್ತಾದಿಗಳ ಅನುಕೂಲಕ್ಕೆ ನೆರವಾಗಬೇಕು ಎಂಬುದು ಭಕ್ತಾದಿಗಳ ಅಭಿಮತವಾಗಿತ್ತು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618